ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ
ಪ್ರಕಟಣೆ

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ ವಾರ್ತಾಪತ್ರಿಕೆ

ಸಂಪುಟ : 3 । ಸಂಚಿಕೆ : 12 ಡಿಸೆಂಬರ್ : 2021 ಪುಟಗಳು : 20 । ಬೆಲೆ : 25/–



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ
ಸಂಸ್ಥಾಪಕ ಅಧ್ಯಕ್ಷರು, ಸಹಕಾರ ರತ್ನ ಪುರಸ್ಕೃತರು,
ಶಿಕ್ಷಣ ಪ್ರೇಮಿ ಹಾಗೂ ಸಹಕಾರಿ

## ಬಿ.ಎಲ್. ಲಕ್ಕೇಗೌಡರು ಅಜರಾಮರ

# ೬೮ನೇ ಅಖಿಲ ಭಾರತ ಸಹಕಾರ ಸಪ್ತಾಹ

## ಬೆಂಗಳೂರಿನಲ್ಲಿ ಸಹಕಾರ ಸಚಿವರಿಂದ ಧ್ವಜಾರೋಹಣ





100 YEARS
Dr. KURIEN
THE MILKMAN OF INDIA

ಕ್ಷೀರಕ್ರಾಂತಿಯ ಹರಿಕಾರ

**ಡಾ. ವರ್ಗೀಸ್ ಕುರಿಯನ್**

ಜನ್ಮ ಶತಾಬ್ಧಿ

ದಿ : 26.11.2021

# ಮಹಾಮಂಡಳದ ನೂತನ ಕಟ್ಟಡಕ್ಕೆ ದೇಣಿಗೆ ಸಲ್ಲಿಕೆ



ಶ್ರೀ ಸನಾ ವುಮೆನ್ಸ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಈ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀಮತಿ ಮಾಲಿನಿ ಎ. ಹಾಗೂ ಕಾರ್ಯದರ್ಶಿ ಶ್ರೀಮತಿ ವನಜ ಎ. ರವರು ಮಹಾಮಂಡಳಕ್ಕೆ ಕಟ್ಟಡ ದೇಣಿಗೆ ಚೆಕ್ಕನ್ನು ನಿರ್ದೇಶಕರಾದ ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರ) ಶ್ರೀಮತಿ ಆಶಾಲತಾ.ಪಿ ರವರಿಗೆ ನೀಡಿದರು.


## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www. ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**






ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
ಅಧ್ಯಕ್ಷರು

> ಈ ವರ್ಷ ದೇಶದಲ್ಲಿ "ಸಹಕಾರದ ಮೂಲಕ ಸಮೃದ್ಧಿ" ಎಂಬ ಧ್ಯೇಯದೊಂದಿಗೆ 68ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸಲಾಗಿದೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಡಿಸೆಂಬರ–12ರಂದು ವಿಧಾನಪರಿಷತ್ತಿನ ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಚುನಾವಣಾ ನೀತಿ ಸಂಹಿತೆ, ಸಪ್ತಾಹ ಆಚರಣೆಗೆ ಮುನ್ನವೇ ಜಾರಿಯಾಗಿದ್ದರ ಪರಿಣಾಮವಾಗಿ ಎಲ್ಲಾ ಸಹಕಾರ ಸಂಸ್ಥೆಗಳು ಸರಳವಾಗಿ ಸಹಕಾರ ಸಪ್ತಾಹ ಆಚರಿಸಿವೆ.

# ಯುವಜನತೆ ಸಹಕಾರ ಕ್ಷೇತ್ರದಲ್ಲಿ ಪಾಲ್ಗೊಳ್ಳುವಿಕೆ ಅರಿವು ಜಾಗೃತಿ ಅತ್ಯಗತ್ಯ

ದೇಶದ ಸಹಕಾರ ಚಳುವಳಿಗೆ 117 ವರ್ಷಗಳು ತುಂಬಿವೆ. ಜನಸಂಖ್ಯೆ ಹೆಚ್ಚಿದಂತೆಲ್ಲಾ ಜನರ ಆರ್ಥಿಕ ಅಗತ್ಯಗಳನ್ನು ಪೂರೈಸುವಲ್ಲಿ ಸಹಕಾರ ಸಂಘಗಳು ಸೇವೆ ಸಲ್ಲಿಸುತ್ತಾ ಬಂದಿದೆಯಾದರೂ ವಲಯವಾರು ಸಂಘಗಳ ಬೆಳವಣಿಗೆಯತ್ತ ಸಹಕಾರಿಗಳು ಗಮನಹರಿಸಬೇಕಾಗಿದೆ.

ಇಂದಿನ ಅಂಕಿ ಅಂಶಗಳ ಪ್ರಕಾರ ದೇಶದ 136 ಕೋಟಿ ಜನಸಂಖ್ಯೆಗೆ ಹೋಲಿಸಿದಾಗ ಸಹಕಾರ ಚಳುವಳಿಯಲ್ಲಿ ಸದಸ್ಯತ್ವ ಪಡೆದವರ ಸಂಖ್ಯೆ ಅಂದಾಜು 30 ಕೋಟಿ ಅಂದರೆ 30% ಇದೆ. ಸಹಕಾರ ಸಂಘಗಳ ಗುಣಮಟ್ಟದ ಸೇವೆ ಸಹಕಾರ ಚಳುವಳಿಯ ಬಗ್ಗೆ ವಿಶ್ವಾಸ, ನಂಬಿಕೆ ಮತ್ತಷ್ಟು ಹೆಚ್ಚಾಗಬೇಕಾದ ಅನಿವಾರ್ಯತೆಯೂ ಇದೆ.

ಈ ವರ್ಷ ದೇಶದಲ್ಲಿ "ಸಹಕಾರದ ಮೂಲಕ ಸಮೃದ್ಧಿ" ಎಂಬ ಧ್ಯೇಯದೊಂದಿಗೆ 68ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸಲಾಗಿದೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಡಿಸೆಂಬರ–12ರಂದು ವಿಧಾನಪರಿಷತ್ತಿನ ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಚುನಾವಣಾ ನೀತಿ ಸಂಹಿತೆ, ಸಪ್ತಾಹ ಆಚರಣೆಗೆ ಮುನ್ನವೇ ಜಾರಿಯಾಗಿದ್ದರ ಪರಿಣಾಮವಾಗಿ ಎಲ್ಲಾ ಸಹಕಾರ ಸಂಸ್ಥೆಗಳು ಸರಳವಾಗಿ ಸಹಕಾರ ಸಪ್ತಾಹ ಆಚರಿಸಿವೆ.

"ಸಹಕಾರದ ಮೂಲಕ ಸಮೃದ್ಧಿ" ಸಾಧಿಸಲು ಹೆಚ್ಚಿನ ಸಂಖ್ಯೆಯ ಯುವಜನತೆ, ವಿಶೇಷವಾಗಿ ಮಹಿಳೆಯರು ಸಹಕಾರ ಸಂಘಗಳಲ್ಲಿ ಸದಸ್ಯತ್ವ ಪಡೆಯುವುದರ ಮೂಲಕ ಸಂಘಗಳಲ್ಲಿ ಲಭ್ಯವಿರುವ ಪ್ರಯೋಜನಗಳನ್ನು ಪಡೆದು ಆರ್ಥಿಕವಾಗಿ, ಸಾಮಾಜಿಕವಾಗಿ ಸ್ವಾವಲಂಬಿಗಳಾಗಬೇಕಿದೆ. ದೇಶದ ಆರ್ಥಿಕತೆ ಸಹಕಾರ ಕ್ಷೇತ್ರ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡುತ್ತಿರುವ ಸಂದರ್ಭದಲ್ಲಿ ಯುವಜನರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಅರಿವು–ಜಾಗೃತಿ ಮೂಡಿಸಲು ಅಗತ್ಯ ಸಹಕಾರ–ಶಿಕ್ಷಣ–ತರಬೇತಿ ಮೂಲಕ ಜಾಗೃತ ಸಹಕಾರಿಗಳನ್ನಾಗಿ ರೂಪಿಸಬೇಕಾದ ಜವಾಬ್ದಾರಿ ಸಹಕಾರ ಮುಖಂಡರುಗಳು, ವಿವಿಧ ಸಹಕಾರ ಮಹಾಮಂಡಳಗಳದ್ದಾಗಿದೆ.

ಯುವಜನರ ಸೇರ್ಪಡೆಯಿಂದ ಉದ್ಯೋಗ ಸೃಷ್ಟಿ, ಸಹಕಾರಿ ಸದಸ್ಯರು ಉತ್ಪಾದಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯದ ಜೊತೆಗೆ ಸಹಕಾರ ಸಂಸ್ಥೆಗಳ ಸೇವೆಗಳ ವಿಸ್ತರಣೆ, ಜನರು ಸ್ವಾವಲಂಬಿ ಬದುಕುವುದು, ವಿನೂತನ ಸಹಕಾರ ಸಂಘಗಳನ್ನು ಕಟ್ಟಿ ಬೆಳೆಸುವ ಕೆಲಸದ ಮೂಲಕ 'ಸಹಕಾರ ಕ್ಷೇತ್ರದ ಮೂಲಕ ಸಮೃದ್ಧಿ' ಕಾಣಲು ಚಿಂತನ ಮಂಥನ ನಡೆಸಬೇಕಾದ ಅನಿವಾರ್ಯತೆ, ಅಗತ್ಯತೆಯೂ ಇದೆ.

ನವೆಂಬರ್ 29 ರಂದು ಪತ್ತಿನ ಸಹಕಾರ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಬಿ.ಎಲ್. ಲಕ್ಕೇಗೌಡರು ನಿಧನ ಹೊಂದಿದ್ದು ತೀವ್ರ ದುಃಖ ತರುವ ವಿಚಾರವಾಗಿದೆ. ಅವರಿಗೆ ಪತ್ತಿನ ಮಹಾಮಂಡಳ ಶೋಕ ವ್ಯಕ್ತಪಡಿಸುತ್ತದೆ. ಅವರ ಸೇವೆಯನ್ನು ಸದಾ ಸ್ಮರಿಸುತ್ತದೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು - 560003
ದೂರವಾಣಿ ಸಂಖ್ಯೆ :
080-23564444 / 23464033 / 23464034
ಇ-ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :
**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

## ಸಹಕಾರ ಸಂಘಗಳಿಗೆ ಆರ್‌ಬಿಐ ಎಚ್ಚರಿಕೆ : 'ಬ್ಯಾಂಕ್' ಪದ ಬಳಸಿದ್ರೆ ಕಠಿಣ ಕ್ರಮ




**ನವದೆಹಲಿ :** ಕೆಲವು ಸಹಕಾರಿ ಸಂಘಗಳು ತಮ್ಮ ಹೆಸರುಗಳಲ್ಲಿ 'ಬ್ಯಾಂಕ್' ಎಂಬ ಪದವನ್ನ ಬಳಸಿದ್ದಕ್ಕಾಗಿ ಮತ್ತು ಸದಸ್ಯರಲ್ಲದ/ ನಾಮಮಾತ್ರದ ಸದಸ್ಯರು/ ಸಹವರ್ತಿ ಸದಸ್ಯರಿಂದ ಠೇವಣಿಗಳನ್ನ ಸ್ವೀಕರಿಸಿರುವ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ (RBI) ಎಚ್ಚರಿಕೆ ನೀಡಿದೆ. ಇದು ಬಿಆರ್ ಕಾಯ್ದೆ, 1949ರ ನಿಬಂಧನೆಗಳನ್ನ ಉಲ್ಲಂಘಿಸಿ ಬ್ಯಾಂಕಿಂಗ್ ವ್ಯವಹಾರ ನಡೆಸುವುದಕ್ಕೆ ಸಮಾನವಾಗಿದೆ.

'ಬ್ಯಾಂಕಿಂಗ್ ನಿಯಂತ್ರಣ (BR) ಕಾಯ್ದೆ, 1949ರ ಸೆಕ್ಷನ್ 7 (ಸಹಕಾರ ಸಂಘಗಳಿಗೆ ಅನ್ವಯಿಸುವಂತೆ) (ಬಿಆರ್ ಕಾಯ್ದೆ, 1949) ಅನ್ನು ಉಲ್ಲಂಘಿಸಿ ಕೆಲವು ಸಹಕಾರ ಸಂಘಗಳು ತಮ್ಮ ಹೆಸರುಗಳಲ್ಲಿ 'ಬ್ಯಾಂಕ್' ಎಂಬ ಪದವನ್ನ ಬಳಸುತ್ತಿರುವುದು ಆರ್ ಬಿಐ ಗಮನಕ್ಕೆ ಬಂದಿದೆ ಎಂದು ಆರ್ ಬಿಐ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಇನ್ನು ಕೆಲವು ಸಹಕಾರ ಸಂಘಗಳು ಸದಸ್ಯರಲ್ಲದವರು/ ನಾಮಮಾತ್ರ ಸದಸ್ಯರು/ ಸಹಸದಸ್ಯರಿಂದ ಠೇವಣಿಗಳನ್ನು ಸ್ವೀಕರಿಸುತ್ತಿವೆ, ಇದು ಬಿಆರ್ ಕಾಯ್ದೆ, 1949ರ ನಿಬಂಧನೆಗಳನ್ನು ಉಲ್ಲಂಘಿಸಿ ಬ್ಯಾಂಕಿಂಗ್ ವ್ಯವಹಾರ ನಡೆಸುವುದಕ್ಕೆ ಸಮಾನವಾಗಿದೆ ಎಂದು ಆರ್‌ಬಿಐ ಗಮನಕ್ಕೆ ಬಂದಿದೆ' ಎಂದಿದೆ.

'ಅಂತಹ ಸಂಘಗಳಿಗೆ ಬಿಆರ್ ಕಾಯ್ದೆ, 1949ರ ಅಡಿಯಲ್ಲಿ ಯಾವುದೇ ಪರವಾನಗಿಯನ್ನು ನೀಡಲಾಗಿಲ್ಲ ಅಥವಾ ಬ್ಯಾಂಕಿಂಗ್ ವ್ಯವಹಾರ ನಡೆಸಲು ಆರ್ ಬಿಐನಿಂದ ಅವರಿಗೆ ಅಧಿಕಾರ ನೀಡಲಾಗಿಲ್ಲ ಎಂದು ಸಾರ್ವಜನಿಕ ಸದಸ್ಯರಿಗೆ ಈ ಮೂಲಕ ತಿಳಿಸಲಾಗಿದೆ' ಎಂದು ಕೇಂದ್ರ ಬ್ಯಾಂಕ್ ಉಲ್ಲೇಖಿಸಿದೆ. ಆರ್ ಬಿಐ ತನ್ನ ಹೇಳಿಕೆಯಲ್ಲಿ, 'ಠೇವಣಿ ವಿಮೆ ಮತ್ತು ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ (DICGC) ನಿಂದ ವಿಮಾ ರಕ್ಷಣೆಯೂ ಈ ಸೊಸೈಟಿಗಳಲ್ಲಿ ಇರಿಸಲಾದ ಠೇವಣಿಗಳಿಗೆ ಲಭ್ಯವಿಲ್ಲ. ಸಾರ್ವಜನಿಕ ಸದಸ್ಯರು ಬ್ಯಾಂಕ್ ಎಂದು ಹೇಳಿಕೊಂಡರೆ ಅಂತಹ ಸಹಕಾರ ಸಂಘಗಳ ಬಗ್ಗೆ ಜಾಗರೂಕರಾಗಿರಲು ಮತ್ತು ಸೂಕ್ತ ಶ್ರದ್ಧೆಯನ್ನ ವಹಿಸುವಂತೆ ಮತ್ತು ಅವರೊಂದಿಗೆ ವ್ಯವಹರಿಸುವ ಮೊದಲು ಆರ್ ಬಿಐ ನೀಡಿದ ಬ್ಯಾಂಕಿಂಗ್ ಪರವಾನಗಿಯನ್ನ ಪರಿಶೀಲಿಸಿ' ಎಂದು ಸೂಚಿಸಿದೆ.

**ಸುಭಾಷಿತ :** ತೊಲಗಲಿ ದುಃಖ, ತೊಲಗಲಿ ಮತ್ಸರ, ಪ್ರೇಮಕೆ ಮೀಸಲು ನವ ಸಂವತ್ಸರ – ಕುವೆಂಪು

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು, ಸಹಕಾರ ರತ್ನ ಪುರಸ್ಕೃತ

# ಬಿ.ಎಲ್. ಲಕ್ಕೇಗೌಡರು ಅಜರಾಮರ



**ಬೆಂಗಳೂರು** : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು, ಭಾರತ್ ಎಜುಕೇಷನ್ ಸೊಸೈಟಿಯ ಸಂಸ್ಥಾಪಕರು, ನಿವೃತ್ತ ವಿಶೇಷ ಜಿಲ್ಲಾಧಿಕಾರಿ, ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಬಿ.ಎಲ್. ಲಕ್ಕೇಗೌಡ (88) ಅವರು ದಿನಾಂಕ : 29.11.2021 ರಂದು ನಿಧನರಾದರು.

ಬಿ.ಎಲ್. ಲಕ್ಕೇಗೌಡರು ಪುತ್ರಿ ಹಾಗೂ ಇಬ್ಬರೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗ ಹಾಗೂ ಅಭಿಮಾನಿಗಳನ್ನು ಅವರು ಅಗಲಿದ್ದಾರೆ. ಜಯನಗರದ 8ನೇ ಬ್ಲಾಕ್ ನಲ್ಲಿರುವ ಅವರ ಸ್ವಗೃಹದಲ್ಲಿ ಅಂದು ಮಧ್ಯಾಹ್ನದವರೆಗೂ ಪಾರ್ಥೀವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಿಕೊಡಲಾಗಿತ್ತು. ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಕಂದಾಯ ಸಚಿವ ಆರ್. ಅಶೋಕ್ ಸೇರಿದಂತೆ ಹಲವು ಗಣ್ಯರು ಸಹಕಾರಿ ಗಣ್ಯರು ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

**ಸಂತಾಪ** : ಸಹಕಾರ ಧುರೀಣ, ಬಿ.ಇ.ಎಸ್. ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರಾದ ಬಿ.ಎಲ್.ಲಕ್ಕೇಗೌಡ ಅವರ ನಿಧನಕ್ಕೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಸಚಿವರಾದ ಎಸ್.ಟಿ. ಸೋಮಶೇಖರ್, ಆರ್. ಅಶೋಕ್, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ಸೇರಿದಂತೆ ವಿವಿಧ ಮಹಾಮಂಡಳಗಳ ಅಧ್ಯಕ್ಷರು, ಅಧಿಕಾರಿಗಳು,

**ಭಾವಪೂರ್ಣ ಶ್ರದ್ಧಾಂಜಲಿ**

**ಶ್ರೀ ಬಿ.ಎಲ್. ಲಕ್ಕೇಗೌಡರು**



**ಸಂತಾಪಕೋರುವವರು : ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ, ಬೆಂಗಳೂರು.**

ಅಭಿಮಾನಿಗಳು ತೀವ್ರ ಸಂತಾಪ ಸೂಚಿಸಿದ್ದಾರೆ.

**ಸಂತಾಪ ಸೂಚಕ ಸಭೆ :** ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದಲ್ಲಿ ಅಧ್ಯಕ್ಷರಾದ ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಸಂತಾಪ ಸೂಚಕ ಸಭೆ ನಡೆಯಿತು. ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡರು ಸೇರಿದಂತೆ ಆಡಳಿತಮಂಡಳಿ ನಿರ್ದೇಶಕರುಗಳು ಪತ್ತಿನ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರಾದ ಬಿ.ಎಲ್. ಲಕ್ಕೇಗೌಡರ ದೂರದೃಷ್ಟಿ, ಚಿಂತನೆಗಳನ್ನು ಹಾಗೂ ಅವರ ಸಮಾಜ ಮುಖಿ ಸೇವೆಗಳ ಬಗ್ಗೆ ಸ್ಮರಿಸಿದರು. ಸಭೆಯಲ್ಲಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಿ ಬಿ.ಎಲ್.ಲಕ್ಕೇಗೌಡರ ನಿಧನದ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ಸದಸ್ಯರಿಗೂ ಅವರನ್ನು ಬಲ್ಲವರಿಗೂ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸಲಾಯಿತು.

### ಬಿ.ಎಲ್. ಲಕ್ಕೇಗೌಡರ ಸ್ಥೂಲ ಪರಿಚಯ

1962ರಲ್ಲಿ ಪ್ರೊಬೇಷನರಿ ತಹಶೀಲ್ದಾರರಾಗಿ ಕರ್ನಾಟಕ ಆಡಳಿತ ಸೇವೆಗೆ ಆಯ್ಕೆ, ಶಿಡ್ಲಘಟ್ಟ, ಬೆಂಗಳೂರು ಉತ್ತರ ದೇವನಹಳ್ಳಿ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕುಗಳಲ್ಲಿ ತಹಶೀಲ್ದಾರರಾಗಿ ಸೇವೆ. ವಿಶೇಷ ಭೂ ಸ್ವಾಧೀನ ಅಧಿಕಾರಿ, ವಾಣಿಜ್ಯ ತೆರಿಗೆ ಅಧಿಕಾರಿ, ಸಿಟಿ ಸರ್ವೆ ವಿಚಾರಣಾಧಿಕಾರಿ, ಸರ್ಕಾರದ ಅಧೀನ ಕಾರ್ಯದರ್ಶಿ, ಹಾಸನ ಉಪ ವಿಭಾಗದ ಉಪವಿಭಾಗಾಧಿಕಾರಿ, ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರ್, ಮಂಡ್ಯ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿ ಮತ್ತು ಸರ್ಕಾರದ ಆಹಾರ ಹಾಗೂ ಸಾರಿಗೆ ಇಲಾಖೆಯ ಉಪಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ, 26 ವರ್ಷಗಳ ಸೇವೆಯ ನಂತರ 1988ನೇ ಮಾರ್ಚ್ ತಿಂಗಳಲ್ಲಿ ಸೇವೆಯಿಂದ ಸ್ವಯಂ ನಿವೃತ್ತಿ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಹಾಗೂ ಶೈಕ್ಷಣಿಕ ಪರಿಷತ್ತಿನ ಸದಸ್ಯರಾಗಿ ಸೇವೆ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಭಾರತ ಸೇವಾದಳ ಮತ್ತು ಸಮಾನ ಮನಸ್ಕರ ಒಕ್ಕೂಟದ ಸ್ಥಾಪನೆಗೂ ಕಾರಣಕರ್ತರಾಗಿದ್ದಾರೆ.

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸ್ಥಾಪನೆ :** ಕರ್ನಾಟಕ ರಾಜ್ಯದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಅನೇಕ ವರ್ಷಗಳಿಂದ ಸಹಕಾರ ತತ್ವದಡಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಿ ತಮ್ಮ ಸದಸ್ಯರಿಗೆ ಹೆಚ್ಚಿನ ಸಾಲ ಸವಲತ್ತುಗಳನ್ನು ನೀಡುತ್ತಿವೆ. ಕರ್ನಾಟಕ ರಾಜ್ಯದಲ್ಲಿ 3600ಕ್ಕೂ ಹೆಚ್ಚಿನ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿವೆ. ಈ ಸಂಘಗಳು ಸರ್ಕಾರದ ಆರ್ಥಿಕ ನೆರವಿಲ್ಲದೆ ತಮ್ಮ ಸ್ವಂತ ಬಂಡವಾಳದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಂಘಗಳಾಗಿವೆ. ರಾಜ್ಯದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿ ಮತ್ತು ಅವುಗಳ ಮಾರ್ಗದರ್ಶನಕ್ಕೆಂದು ಪಟ್ಟಣ ಬ್ಯಾಂಕುಗಳ ಮಹಾಮಂಡಳವು ಹಲವಾರು ವರ್ಷಗಳ ಹಿಂದೆಯೇ ಸ್ಥಾಪನೆಗೊಂಡಿದೆಯಾದರೂ, ಅದು ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿಯಲ್ಲಿ ಗಮನ ಹರಿಸಲು ಪ್ರಯತ್ನಿಸಿದ ಕಾರಣ ಹಾಗೂ ರಾಜ್ಯದ ಆಯಾ ಸಹಕಾರ ವಲಯದ ಸಂಘಗಳಿಗೆ ಸಂಬಂಧಿಸಿದಂತೆ ಅನೇಕ ಶೃಂಗ ಸಂಸ್ಥೆಗಳು ಸ್ಥಾಪನೆಗೊಂಡ ಹಿನ್ನೆಲೆಯಲ್ಲಿ ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ಸ್ಥಾಪನೆಗೆ 1996ರಲ್ಲಿ ಚಿಂತನೆ ಮಾಡಲಾಯಿತು. ಈ ನಿಟ್ಟಿನಲ್ಲಿ ಅನೇಕ ಪ್ರಯತ್ನಗಳು ನಡೆದವು. ಅಂತಿಮವಾಗಿ ಶ್ರೀ ಬಿ.ಎಲ್. ಲಕ್ಕೇಗೌಡ, ಮುಖ್ಯಪ್ರವರ್ತಕರು ಹಾಗೂ ಇತರೆ 12 ಜನ ಪ್ರವರ್ತಕರು ಸೇರಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿ ಸಹಕಾರ ಸಂಘಗಳ ನಿಬಂಧಕರು ದಿನಾಂಕ : 06.11.2004 ರಂದು ಮಹಾಮಂಡಳವನ್ನು ನೋಂದಣಿ ಮಾಡಿದರು. ಅಂದಿನಿಂದ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಕಾರ್ಯನಿರ್ವಹಿಸುತ್ತಿದೆ. ಬಿ.ಎಲ್.ಲಕ್ಕೇಗೌಡರು ಸಂಸ್ಥಾಪಕ ಅಧ್ಯಕ್ಷರಾಗಿ 10 ವರ್ಷಗಳ ಸೇವೆ ಸಲ್ಲಿಸಿದ್ದರು.

**ಸಮಾಜ ಸೇವೆ :** ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಹಾಸನ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಹಕಾರ ಕ್ಷೇತ್ರಗಳಲ್ಲಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ನಿರಂತರ ಕೆಲಸ ನಿರ್ವಹಿಸಿದ್ದು, ಇವರ ಸೇವೆ ಯುಜನರಿಗೆ ಮಾದರಿಯಾಗಿದೆ.

### ಬೆಂಗಳೂರು ಜಿಲ್ಲೆ

1. ದಿ ಭಾರತ್ ವಿದ್ಯಾ ಸಂಸ್ಥೆ, ಜಯನಗರ, ಬೆಂಗಳೂರು
2. ದಿ ಭಾರತ್ ಗೃಹ ನಿರ್ಮಾಣ ಸಹಕಾರ ಸಂಘ ನಿ., ಜಯನಗರ, ಬೆಂಗಳೂರು
3. ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಜಯನಗರ, ಬೆಂಗಳೂರು
4. ದಿ ಭಾರತಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಜಯನಗರ, ಬೆಂಗಳೂರು
5. ಬೆಂಗಳೂರು ಜಿಲ್ಲೆಗಳ ಪದವೀಧರರ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಬೆಂಗಳೂರು
6. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ನಿ., ಬೆಂಗಳೂರು
7. ದಿ ಭಾರತ್ ಮುದ್ರಣ ಮತ್ತು ಪ್ರಕಾಶನ ಸಹಕಾರ ಸಂಘ ನಿ., ಜಯನಗರ, ಬೆಂಗಳೂರು
8. ಬೆಂಗಳೂರು ನಿರ್ಮಾಪಕ ಕೆಂಪೇಗೌಡ ಕೇಂದ್ರ ಸಮಿತಿ, ಬೆಂಗಳೂರು
9. ಸಮಾಜ ಸಂಪರ್ಕ ವೇದಿಕೆ, ವಿಜಯನಗರ, ಬೆಂಗಳೂರು
10. ಶ್ರೀ ಕಂಠೀರವ ಕುಸ್ತಿ ಪಂದ್ಯ ಸಂಸ್ಥೆ, ಬೆಂಗಳೂರು
11. ದಿ ಭಾರತ್ ಸಹಕಾರಗ್ರಾಹಕರ ಸಗಟು ಮಾರಾಟ ಸಂಘ ನಿ., ಜಯನಗರ, ಬೆಂಗಳೂರು

### ಬೆಂಗಳೂರು ಗ್ರಾಮಾಂತರ ಜಿಲ್ಲೆ

1. ಒಕ್ಕಲಿಗರ ಸಂಘ, ಮಾಗಡಿ, ಮಾಗಡಿ ತಾಲ್ಲೂಕು

## ಪ್ರಶಸ್ತಿಗಳು

- ಅಸಾಧರಣ ಸೇವೆ, ಸಾಧನೆ ಮತ್ತು ಕೊಡುಗೆಗಾಗಿ–ಆಲ್‌ಇಂಡಿಯಾ ಯೂನಿಟಿ ಕಾನ್ಫರೆನ್ಸ್, ಹೊಸದೆಹಲಿ ಇವರಿಂದ ದಿ:18.11.1996 ರಂದು "ಇಂದಿರಾಗಾಂಧಿ ಪ್ರಿಯದರ್ಶಿನಿ ಪ್ರಶಸ್ತಿ–1996"
- ಗ್ಲೋಬಲ್ ಎಕನಾಮಿಕ್ ಕೌನ್ಸಿಲ್ – ನವದಹೆಲಿ ಇವರಿಂದ ದಿ : 25.08.2000 – ರಾಷ್ಟ್ರಕ್ಕೆ ಸಲ್ಲಿಸಿದ ಅಸಾಧಾರಣ ವೈಯಕ್ತಿಕ ಸಾಧನೆ ಗಣನೀಯ ಸೇವೆಗಾಗಿ "ರಾಷ್ಟ್ರೀಯ ಏಕತ ಪ್ರಶಸ್ತಿ"
- ದೆಹಲಿ ಕನ್ನಡಿಗರವರಿಂದ 2000 ಅಕ್ಟೋಬರ್ 11, 12 ರಂದು ಕಟ್ಮಂಡುವಿನಲ್ಲಿ ನಡೆದ ಕನ್ನಡ ಸಮಾರಂಭದಲ್ಲಿ ಡಾ:ಕೆ.ವಿ.ಶಂಕರೇಗೌಡ ಸ್ಮಾರಕ" ಶ್ರೇಷ್ಠ ಸಾಮಾಜಿಕ ಕಾರ್ಯಕರ್ತರ ಪ್ರಶಸ್ತಿ"
- ದಿನಾಂಕ : 24.11.2000ರಂದು ಸಹಕಾರಿಗಳ ಸಮಾವೇಶ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿರುವ ಅನುಪಮ ಸೇವೆಗಾಗಿ ರಾಜ್ಯ ಸರ್ಕಾರದಿಂದ "ಸಹಕಾರ ಶಿಲ್ಪಿ ಪ್ರಶಸ್ತಿ"
- ಬೆಳಗಾವಿಯಲ್ಲಿ 2003ನೇ ಇಸವಿ ಮಾರ್ಚ್ 7,8,9 ರಂದು ಜರುಗಿದ ಅಖಿಲ ಭಾರತ 70ನೇಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿದ ಅನುಪಮ ಸೇವೆಗಾಗಿ "ಕರ್ನಾಟಕ ಶ್ರೀ" ಪ್ರಶಸ್ತಿ
- ಶ್ರೀ ಬಿ.ಎಲ್. ಲಕ್ಕೇಗೌಡ ಇವರು ಆಡಳಿತ ಸಹಕಾರ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಅನುಪಮ ಸೇವೆಯನ್ನು ಸ್ಮರಿಸಿ ಬೆಂಗಳೂರು ಮಹಾನಗರ ಪಾಲಿಕೆಯು "2005ನೇ ಸಾಲಿನ ಕೆಂಪೇಗೌಡ ಪ್ರಶಸ್ತಿ" ನೀಡಿ ದಿನಾಂಕ : 01.07.2005 ರಂದು ನಡೆದ ಕೇಂಪೇಗೌಡ ದಿನಾಚರಣೆಯಂದು ಗೌರವಿಸಿದೆ.
- ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಅನುಪಮ ಸೇವೆಗಾಗಿ ವಿಶ್ವಮಾನವ ರಾಷ್ಟ್ರಕವಿ ಕುವೆಂಪು ಕಲಾನಿಕೇತನ(ರಿ) ಬೆಂಗಳೂರು, ಈ ಸಂಸ್ಥೆಯಿಂದ "ಕುವೆಂಪು ಕನ್ನಡ ರತ್ನಶ್ರೀ ಪ್ರಶಸ್ತಿ–2006"
- ದಿನಾಂಕ : 28.05.2006ರಂದು ಬೆಂಗಳೂರಿನಲ್ಲಿ ನಡೆದ ಆಲ್ ಇಂಡಿಯಾ ಕಾನ್ಫರೆನ್ಸ್ ಆಫ್ ಇನ್ವಲೆಕ್ಚುಯಲ್ಸ್ 2006ನೇ ಬೆಳ್ಳಿ ಹಬ್ಬದ ಆಚರಣೆ ಅಂಗವಾಗಿ ನಡೆದ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯದ ಬುದ್ದಿ ಜೀವಿಗಳ ಗೌರವಾರ್ಥ ವಿವಿಧಕ್ಷೇತ್ರದಲ್ಲಿ ಸಮಾಜದಲ್ಲಿ ಸಲ್ಲಿಸಿರುವ ಅನುಪಮ ಸೇವೆ ಹಾಗೂ ಪ್ರತಿಭೆಗಾಗಿ "ಕರ್ನಾಟಕ ಸುಪುತ್ರ" ಪ್ರಶಸ್ತಿ ಪುರಸ್ಕಾರ.
- ದಿನಾಂಕ : 26.07.2007ರಂದು ಮೈಸೂರಿನಲ್ಲಿ ನಡೆದ ಸಹಕಾರ ಚಳುವಳಿಯ ಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ಸರ್ಕಾರದಿಂದ "ಸಹಕಾರರತ್ನ" ಪ್ರಶಸ್ತಿ ಪುರಸ್ಕೃತರು.
- ಭಾರತ ಯುವಕೇಂದ್ರದ ವತಿಯಿಂದ ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿದ ಅನುಪಮ ಸೇವೆಗಾಗಿ ಹಾಗೂ ಆದರ್ಶ ಜೀವಿತದ ಚಳುವಳಿಗಾಗಿ "ರಾಷ್ಟ್ರೀಯ ರತ್ನ–2008" ರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರ.

2. ಮಾಗಡಿಕೆಂಪೇಗೌಡ ವಿದ್ಯಾರ್ಥಿನಿಲಯ ಮಾಗಡಿ
3. ದಿ ಭಾರತ್‌ಕೋ–ಆಪರೇಟಿವ್‌ಕ್ರೆಡಿಟ್ ಸೊಸೈಟಿ ಲಿ., ಮಾಗಡಿ
4. ದಿ ಭಾರತಿಕೋ–ಆಪರೇಟಿವ್‌ಕ್ರೆಡಿಟ್ ಸೊಸೈಟಿ ಲಿ., ರಾಮನಗರ

### ಹಾಸನ ಜಿಲ್ಲೆ

1. ಚನ್ನರಾಯಪಟ್ಟಣದಲ್ಲಿಹೇಮಾವತಿಕಲ್ಯಾಣ ಮಂಟಪ ನಿರ್ಮಾಣ
2. ಹಾಸನದಲ್ಲಿ ಆದಿಚುಂಚನಗಿರಿ ಸಮುದಾಯ ಭವನ ನಿರ್ಮಾಣ
3. ಚನ್ನರಾಯಪಟ್ಟಣದಲ್ಲಿ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ವತಿಯಿಂದ ಬಿ.ಇಡಿ, ಕಾಲೇಜು, ಔಷಧಕಾಲೇಜು, ಪದವಿ ಪೂರ್ವಕಾಲೇಜು ಮತ್ತು ಪ್ರೌಢ ಶಾಲೆ ಆರಂಭ.
4. ಚನ್ನರಾಯಪಟ್ಟಣ ತಾಲ್ಲೂಕು ಬೂಕನ ಬೆಟ್ಟದ ಶ್ರೀರಂಗನಾಥ ಸ್ವಾಮಿ ದೇವಸ್ಥಾನದ ಜೀರ್ಣೋದ್ದಾರ ಮತ್ತು ದೇವರ ಪ್ರತಿಷ್ಠಾಪನೆ.
5. ಹಾಸನ ಜಿಲ್ಲಾ ಒಕ್ಕಲಿಗರ ಸಂಘದ ನೋಂದಣಿ ಮತ್ತು ಆಡಳಿತ ಸುಧಾರಣೆ

### ಮಂಡ್ಯಜಿಲ್ಲೆ

1. ಮಳವಳ್ಳಿ ತಾಲ್ಲೂಕು ಮುತ್ತತ್ತಿ ಶ್ರೀ ಆಂಜನೇಯ ಸ್ವಾಮಿದೇವಸ್ಥಾನದ ನಿರ್ಮಾಣ ಮತ್ತುದೇವರ ಪ್ರತಿಷ್ಠಾಪನೆ ಮುಖ್ಯಕಾರಣಕರ್ತರು.

## 68ನೇ ಅಖಿಲ ಭಾರತ ಸಹಕಾರ ಸಪ್ತಾಹ

## ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರಿಂದ ಧ್ವಜಾರೋಹಣ

# ಸಹಕಾರ ಕ್ಷೇತ್ರವನ್ನು ಬಲಪಡಿಸಲು ಜಿ.ಟಿ ದೇವೇಗೌಡರ ಕರೆ



**ಬೆಂಗಳೂರು :** ವಿಧಾನ ಪರಿಷತ್ ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ 68ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ರಾಜ್ಯದಾದ್ಯಂತ ಸರಳವಾಗಿ ಆಚರಿಸಲಾಗಿದೆ. ಬೆಂಗಳೂರಿನ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ಅವರು ಸಹಕಾರ ಧ್ವಜಾರೋಹಣ ನೆರವೇರಿಸುವುದರ ಮೂಲಕ ಸಹಕಾರ ಸಪ್ತಾಹಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದ ಆರಂಭದಲ್ಲಿ ಮಹಾತ್ಮಗಾಂಧಿ, ಪಂಡಿತ್ ಜವಹರಲಾಲ್ ನೆಹರೂ, ಶಿದ್ದನಗೌಡ ಸಂಣರಾಮನಗೌಡ ಪಾಟೀಲ್ ಮತ್ತು ಕ್ಷೀರ ಕ್ರಾಂತಿಯ ಹರಿಕಾರ ಡಾ। ವರ್ಗೀಸ್ ಕುರಿಯನ್ ಅವರ ಭಾವಚಿತ್ರಗಳಿಗೆ ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್, ಶಾಸಕರೂ ಹಾಗೂ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ ದೇವೇಗೌಡರು, ನಿರ್ದೇಶಕರುಗಳಾದ ಬಸವರಾಜ ಅರಬಗೊಂಡ, ಆರ್. ರಾಮರೆಡ್ಡಿ, ಈರಣ್ಣ ಸಿ. ಪಟ್ಟಣಶೆಟ್ಟಿ, ಜೆ.ಎಂ. ಶಿವಪ್ರಸಾದ್, ಎ.ಸಿ. ನಾಗರಾಜ್, ಕೆ.ಸಿ. ನಾಗರತ್ನ, ಕಾರ್ಯದರ್ಶಿ ಲಕ್ಷ್ಮೀಪತಯ್ಯ ಅವರುಗಳು ಪುಷ್ಪಾರ್ಚನೆ ಮೂಲಕ ನಮನ ಸಲ್ಲಿಸಿದರು.

ನಂತರ ನಡೆದ ಕಾರ್ಯಕ್ರಮದಲ್ಲಿ ಸಹಕಾರ ಮಹಾಮಂಡಳದ

**ರಾಜ್ಯದ ಸಹಕಾರ ಚಳವಳಿಯ ಬೆಳವಣಿಗೆ ತೃಪ್ತಿಕರವಾಗಿದೆ. ಸಾಧಿಸಬೇಕಾಗಿರುವುದು ಬಹಳಷ್ಟಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಪ್ರತಿಯೊಬ್ಬ ನಾಗರಿಕರು ಸಹಕಾರ ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆದು, ಸಂಘಗಳಲ್ಲಿ ದೊರೆಯುವ ಪ್ರಯೋಜನಗಳ ಫಲಾನುಭವಿಗಳಾಗಬೇಕೆಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ಅವರು ಕರೆ ನೀಡಿದರು.**



ಹೆಮ್ಮೆಯ ಪ್ರಕಟಣೆಯಾದ ಸಹಕಾರ ವಾರಪತ್ರಿಕೆ ಸಂಚಿಕೆಯನ್ನು ಸಚಿವ ಎಸ್.ಟಿ. ಸೋಮಶೇಖರ್ ಅವರು ಬಿಡುಗಡೆಗೊಳಿಸಿದರು.

ರಾಜ್ಯದ ಸಹಕಾರ ಚಳವಳಿಯ ಬೆಳವಣಿಗೆ ತೃಪ್ತಿಕರವಾಗಿದೆ. ಸಾಧಿಸಬೇಕಾಗಿರುವುದು ಬಹಳಷ್ಟಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಪ್ರತಿಯೊಬ್ಬ ನಾಗರಿಕರು ಸಹಕಾರ ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆದು, ಸಂಘಗಳಲ್ಲಿ ದೊರೆಯುವ ಪ್ರಯೋಜನಗಳ ಫಲಾನುಭವಿಗಳಾಗಬೇಕೆಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ಅವರು ಕರೆ ನೀಡಿದರು. ಸಹಕಾರ ಚಳವಳಿ ಬಲವರ್ಧನೆಗೊಂಡು ದೇಶದಲ್ಲಿಯೇ ಕರ್ನಾಟಕ ರಾಜ್ಯವು ಮೊದಲ ಸ್ಥಾನವನ್ನು ಅಲಂಕರಿಸಬೇಕು. ಈ ನಿಟ್ಟಿನಲ್ಲಿ ನಾವೆಲ್ಲರೂ ಬದ್ಧತೆಯಿಂದ ತೊಡಗಿಸಿಕೊಳ್ಳಬೇಕಾಗಿದೆ ಎಂದರು.

ಸಚಿವ ಎಸ್.ಟಿ. ಸೋಮಶೇಖರ್ ಅವರು ರಾಜ್ಯದ ಹಿರಿಯ ಸಹಕಾರಿ ಮುಖಂಡರಾಗಿ ರಾಜ್ಯದ ಸಹಕಾರಾಭಿವೃದ್ಧಿಗೆ ವಿಶೇಷ ಒತ್ತನ್ನು ನೀಡುತ್ತಾ ಬಂದಿದ್ದಾರೆ. ಮುಂಬರುವ ದಿನಗಳಲ್ಲಿಯು ರಾಜ್ಯದ ಸಹಕಾರ ಚಳವಳಿ ಮತ್ತಷ್ಟು ಬಲಗೊಳ್ಳಲು ದೂರದೃಷ್ಟಿಯುಳ್ಳ ಯೋಜನೆಗಳನ್ನು ಹಮ್ಮಿಕೊಳ್ಳುವರೆಂಬ ಭರವಸೆಯನ್ನು ಅವರು ವ್ಯಕ್ತಪಡಿಸಿದರು.

ಮುಂದುವರಿದು ಮಾತನಾಡಿದ ಜಿ.ಟಿ. ದೇವೇಗೌಡರು ರಾಜ್ಯದಲ್ಲಿ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳ ಮೂಲಕ ಶೂನ್ಯ ಬಡ್ಡಿದರ ಮತ್ತು ರಿಯಾಯಿತಿ ಬಡ್ಡಿದರದಲ್ಲಿ ಬೆಳೆಸಾಲ ನೀಡುತ್ತಿರುವುದರಿಂದ ಕೃಷಿ ಉತ್ಪಾದನೆ ಹೆಚ್ಚಳವಾಗಿ ರೈತರ ಆದಾಯ ದ್ವಿಗುಣಗೊಳ್ಳುತ್ತಿದೆ. ಗ್ರಾಮೀಣ ಹೈನುಗಾರರು ಸ್ವಾವಲಂಬಿ ಜೀವನ ನಡೆಸಲು ಪ್ರತಿ ಲೀಟರ್ ಹಾಲಿಗೆ ಪ್ರೋತ್ಸಾಹ ಧನವಾಗಿ 5 ರೂ. ಸಹಾಯಧನ ನೀಡುತ್ತಿರುವುದು ಬೇರೆ ಯಾವ ರಾಜ್ಯದಲ್ಲೂ ಇಲ್ಲ. ರಾಜ್ಯದ ರೈತರಿಗೆ, ಹೈನುಗಾರರಿಗೆ ಸಹಕಾರ ವಲಯದಿಂದ ವಿಶೇಷ ಸೌಲಭ್ಯ ಸಿಕ್ಕಿದೆ ಎಂದು ಹರ್ಷ ವ್ಯಕ್ತಪಡಿಸಿದರು. ದೇಶದ ಕ್ಷೀರ ಕ್ರಾಂತಿಯ ಹರಿಕಾರ ಡಾ। ವರ್ಗೀಸ್ ಕುರಿಯನ್ ಅವರಿಗೆ ಇದೇ ನವೆಂಬರ್ 26ಕ್ಕೆ 100 ವರ್ಷಗಳು ತುಂಬಲಿದ್ದು, ಅವರ ಜನ್ಮಶತಾಬ್ದಿಯನ್ನು ವಿಶಿಷ್ಟವಾಗಿ ಆಚರಿಸುವಂತಾಗಬೇಕು. ಅವರ ಸಾಧನೆಗಳನ್ನು ಶ್ಲಾಘಿಸುವ ಕಾರ್ಯ ನಡೆಯಬೇಕು ಎಂದರು.

ಮುಂಬರುವ ದಿನಗಳಲ್ಲಿ ರಾಜ್ಯ ಸಹಕಾರ ಚಳವಳಿ ಆರೋಗ್ಯಕರ ಬೆಳವಣಿಗೆಗೆ ಸಹಕಾರ ಸಚಿವರ ಮಾರ್ಗದರ್ಶನದ ಮೂಲಕ ಸಹಕಾರ ಮಹಾಮಂಡಳ ಶಿಕ್ಷಣ, ತರಬೇತಿ, ಪ್ರಚಾರಕ್ಕೆ ಅವಿರತ ಪ್ರಯತ್ನ ನಡೆಸುವುದು ಎಂದರು. ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಎಲ್ಲರೂ ಬದ್ಧತೆಯಿಂದ ಸಹಕಾರ ಚಳವಳಿಯ ಬೆಳವಣಿಗೆಗೆ ಶ್ರಮಿಸಬೇಕೆಂದರು. ಕಾರ್ಯಕ್ರಮದ ಆರಂಭದಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಮಹಾಮಂಡಳದ ಕಾರ್ಯದರ್ಶಿ ಲಕ್ಷ್ಮೀಪತಯ್ಯನವರು ಸಹಕಾರ ಚಳವಳಿ ನಡೆದು ಬಂದ ದಾರಿಯ ಬಗ್ಗೆ ಮತ್ತು ಸಹಕಾರ ಸಪ್ತಾಹದ ಮಹತ್ವ ಹಾಗೂ ಆಚರಣೆಯ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿ, ಎಲ್ಲರನ್ನು ಸ್ವಾಗತಿಸಿದರು.

## 68ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ



**ಶಿಕಾರಿಪುರ** : ಕರ್ನಾಟಕ ರಾಜ್ಯ ಪರಿಸರ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಸಹಕಾರ ಸಂಘ ನಿ., ಶಿಕಾರಿಪುರ ಮತ್ತು ಬಸವೇಶ್ವರ ಸಹಕಾರಿ ಒಕ್ಕೂಟ, ಶಿಕಾರಿಪುರ ಸಹಯೋಗದೊಂದಿಗೆ ದಿನಾಂಕ : 14.11.2021 ರಂದು ಬನಸಿರಿ ಸಭಾಂಗಣದಲ್ಲಿ 68ನೇ ಅಖಿಲ ಭಾರತ ಸಹಕಾರ ಸಪ್ತಾಹ ಧ್ವಜಾರೋಹಣ ಕಾರ್ಯಕ್ರಮವನ್ನು ಆಚರಿಸಲಾಯಿತು.

ಸಹಕಾರ ಸಪ್ತಾಹ ಧ್ವಜಾರೋಹಣವನ್ನು ಪತ್ತಿನ ಮಹಾಮಂಡಳದ ಉಪಾಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸಹಕಾರ ತೋಟಗಾರಿಕಾ ಮಹಾಮಂಡಳ ನಿ., ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀಯುತ ಬಿ.ಡಿ.ಭೂಕಾಂತರವರು ನೆರವೇರಿಸಿಕೊಟ್ಟರು ಹಾಗೂ ಸಹಕಾರ ಸಂಘಗಳ ಬಲವರ್ಧನೆಗಾಗಿ ಗ್ರಾಮ ಪಂಚಾಯಿತಿಗಳಲ್ಲಿ ಒಂದೊಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸಬೇಕು ಎಂದು ಕೇಂದ್ರ ಸಹಕಾರ ಸಚಿವಾಲಯದಲ್ಲಿ ಚರ್ಚೆ ನಡೆಯುತ್ತಿರುವ ಬಗ್ಗೆ ಮಾಹಿತಿಯನ್ನು ತಮ್ಮ ಭಾಷಣದಲ್ಲಿ ತಿಳಿಸಿದರು.

ಈ ಕಾರ್ಯಕ್ರಮಕ್ಕೆ ಶಿವಮೊಗ್ಗ ಜಿಲ್ಲಾ ಸಹಕಾರಿ ಯೂನಿಯನ್‌ನ ನಿರ್ದೇಶಕರುಗಳಾದ ನಾಗರಾಜಸ್ವಾಮಿ, ಮಮತ ಚಂದ್ರಕುಮಾರರವರು ಹಾಗೂ ಇನ್ನಿತರೆ ಪತ್ತಿನ ಮತ್ತು ಪತ್ತಿನೇತರ ಸಹಕಾರ ಸಂಘಗಳ ಅಧ್ಯಕ್ಷರುಗಳಾದ ಶಶಿಕಲಾ, ಮೇಘನ, ಸಿ.ಪಿ.ಹೆಗಡೆ, ಮೀನಾಕ್ಷಮ್ಮ, ಮೌನೇಶ್ವರಪ್ಪ, ಲೋಕೇಶ್ವರ, ನಾಗರಾಜ ಶಾಂತಕುಮಾರ ಮಲ್ಲಿಕಾರ್ಜುನಚಾರ, ಶಶಿಕಲಾ ರುದ್ರೇಶ, ಕವಿತಾಸುರೇಶ ಮತ್ತಿತರು ಉಪಸ್ಥಿತರಿದ್ದರು.




## ಡಾ. ವರ್ಗೀಸ್ ಕುರಿಯನ್ ಜನ್ಮಶತಮಾನೋತ್ಸವ

# ಹೈನೋದ್ಯಮದ ಮೂಲಕ ರೈತರ ಆರ್ಥಿಕ ಹಾಗೂ ಸಾಮಾಜಿಕ ಸ್ವಾವಲಂಬನೆಯ ಹರಿಕಾರ ಡಾ। ಕುರಿಯನ್ : ಬಿ.ಸಿ. ಸತೀಶ್

**ಬೆಂಗಳೂರು** : ಸ್ವಾತಂತ್ರ್ಯೋತ್ತರ ಭಾರತವು ಸಾಧಿಸಿದ ಮಹತ್ಸಾಧನೆಗಳಲ್ಲಿ ಕ್ಷೀರಕ್ರಾಂತಿಯು ಅವಿಸ್ಮರಣೀಯವಾದುದು. ಈ ಮೂಲಕ ಭಾರತೀಯ ರೈತರ ಹಾಗೂ ಹೈನೋದ್ಯಮದಾರರ ಸಾಮಾಜಿಕ ಹಾಗೂ ಆರ್ಥಿಕ ಸ್ವಾವಲಂಬನೆಯ ಹರಿಕಾರರು ಡಾ। ವರ್ಗೀಸ್ ಕುರಿಯನ್ ರವರು. ಇವರಿಗೆ ಭಾರತದ ರೈತರು, ಕರ್ನಾಟಕದ ಕೆ.ಎಂ. ಎಫ್. ಹಾಗೂ ರೈತರ ಪರವಾಗಿ ಪ್ರಣಾಮಗಳನ್ನು ಇಂದು ಸಲ್ಲಿಸುತ್ತಿದ್ದೇವೆ ಎಂದು ಕರ್ನಾಟಕ ಸಹಕಾರ ಹಾಲು ಮಹಾಮಂಡಳಿಯ ವ್ಯವಸ್ಥಾಪಕ ನಿರ್ದೇಶಕರಾದ ಬಿ.ಸಿ. ಸತೀಶ್ ರವರು ತಿಳಿಸಿದರು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ರಾಷ್ಟ್ರೀಯ ಹೈನು ಪೋಷಕಾಂಶ ಮತ್ತು ಶರೀರಶಾಸ್ತ್ರ ಸಂಸ್ಥೆ, ರಾಷ್ಟ್ರೀಯ ಹೈನು ಸಂಶೋಧನಾ ಸಂಸ್ಥೆ, ಗುಜರಾತ್ ಸಹಕಾರಿ ಹಾಲು ಮಾರಾಟ ಮಹಾಮಂಡಳ ಹಾಗೂ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಸಂಯುಕ್ತಾಶ್ರಯದಲ್ಲಿ ಡಾ। ವರ್ಗೀಸ್ ಕುರಿಯನ್ ಜನ್ಮಶತಮಾನೋತ್ಸವ ಆಚರಣೆ, ತಾಂತ್ರಿಕ ವಿಚಾರ ಸಂಕಿರಣ ಹಾಗೂ ಕ್ಷೀರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಆರೂವರೆ ದಶಕಗಳ ಕಾಲ ಭಾರತದ ಹೈನೋದ್ಯಮ ಹಾಗೂ ರೈತರಿಗಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟ ಕುರಿಯನ್ ರವರು ಭಾರತದಲ್ಲಿ ಜನಿಸಿದ ಮಹಾನ್ ಪುರುಷರಲ್ಲೊಬ್ಬರು. ಇವರ ಮಾನವೀಯ ಹಾಗೂ ನೈತಿಕ ಮೌಲ್ಯಗಳು ಇಂದಿನ ಯುವ ಪೀಳಿಗೆಗೆ ಮಾರ್ಗದರ್ಶನ. ಅಮೂಲ್ ಮಾದರಿಯನ್ನು ಭಾರತದಲ್ಲಿ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸಿ, ಭಾರತೀಯ ಗ್ರಾಮೀಣ ಮಹಿಳೆಯರ ಸ್ವಾವಲಂಬಿ ಬದುಕಿಗೆ ನಾಂದಿಹಾಡಿದರು. ಇಂತಹ ಮಹಾನ್ ರಾಷ್ಟ್ರಪ್ರೇಮಿಗೆ ಭಾರತ ರತ್ನ ನೀಡಬೇಕೆಂದು ಈ ಸಂದರ್ಭದಲ್ಲಿ ಎಲ್ಲಾ ಸಹಕಾರಿಗಳು ಹಾಗೂ ರೈತರ ಪರವಾಗಿ ಮನವಿ ಮಾಡುತ್ತೇವೆ. ಭಾರತದಲ್ಲಿ ಇಂದು ಪ್ರತಿದಿನ 40 ಕೋಟಿ ಲೀಟರ್ ಹಾಲು ಸಂಗ್ರಹಣೆಯಾಗುತ್ತಿದೆ. ಇದಕ್ಕೆ ಕುರಿಯನ್ ರವರು ಕಾರಣಕರ್ತರಾಗಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೆ.ಎಂ.ಎಫ್.ನ ಮಾಜಿ ವ್ಯವಸ್ಥಾಪಕ ನಿರ್ದೇಶಕರಾದ ಅಚಲ ಪದ್ಮನಾಭನ್ ರವರು ಮಾತನಾಡುತ್ತಾ, ಡೈರಿ ಉದ್ಯಮ ಇಂದು ಮಾಡಿರುವ ಸಾಧನೆ ವರ್ಗೀಸ್ ಕುರಿಯನ್ ರವರಿಗೆ ನೀಡಿದ ಗೌರವವಾಗಿದೆ. ಅವರು ಬದುಕಿದಿದ್ದರೆ ಡೈರಿ ಉದ್ಯಮದ ಬೆಳವಣಿಗೆಯ ಕುರಿತು ಹೆಮ್ಮೆಪಡುತ್ತಿದ್ದರು. ಕೋವಿಡ್-19 ಸಂದರ್ಭದಲ್ಲಿ ಸಾಮಾನ್ಯ ಜೀವನವೇ ಅಸ್ತವ್ಯಸ್ತವಾಗಿದ್ದ ಸಂದರ್ಭದಲ್ಲಿಯೂ ಡೈರಿ ಉದ್ಯಮ ಹಾಗೂ ಹಾಲು ಉತ್ಪಾದಕರು ತೋರಿದ ಕಾಳಜಿ, ನಿರ್ವಹಿಸಿದ ಕಾರ್ಯವೈಖರಿಯನ್ನು ನಾವೆಲ್ಲರೂ ಅಭಿನಂದಿಸಬೇಕು ಎಂದರು.

ಎನ್‌ಡಿಡಿಬಿ ಯ ನಿವೃತ್ತ ಪ್ರಧಾನ ವ್ಯವಸ್ಥಾಪಕರಾದ ಡಾ। ನಾಗರಾಜ್ ಬೆಳವಾಡಿ ಅವರು ಮಾತನಾಡಿ ಕುರಿಯನ್ ರವರು ಸಹಕಾರಿ ಡೈರಿ ಉದ್ಯಮ ಯಶಸ್ವಿಯಾಗಬೇಕಾದರೆ ವ್ಯಾಪಾರಕ್ಕೆ ಹೆಚ್ಚು ಆದ್ಯತೆ, ಅಷ್ಟೇ ಪ್ರಾಮುಖ್ಯತೆ ನೀಡಬೇಕು ಹಾಗೂ ಸಹಕಾರಿ ವ್ಯವಸ್ಥೆಯೊಳಗೆ ವೃತ್ತಿಪರತೆಗೆ ಪ್ರೋತ್ಸಾಹ ನೀಡುವ ಮೂಲಕ ಗುಣಮಟ್ಟಕ್ಕೆ ಪ್ರಾಶಸ್ತ್ಯ ನೀಡಿ ಡೈರಿ ಉದ್ಯಮವನ್ನು ಬಲಿಷ್ಠಗೊಳಿಸಬೇಕೆಂಬುದನ್ನು ಬಲವಾಗಿ ಪ್ರತಿಪಾದಿಸಿದ್ದರು. ಅವರ ಈ ಆಲೋಚನೆಗಳೇ ಅಮೂಲ್ ಸಂಸ್ಥೆಯು ಭಾರತದ ಡೈರಿ ಉದ್ಯಮದಲ್ಲಿ ಮಾತೃ ಸಂಸ್ಥೆಯಾಗಿ ರೂಪುಗೊಂಡಿದೆ ಎಂಬುದನ್ನು ವಿವರಿಸಿ ಕುರಿಯನ್ ರವರ ವ್ಯಕ್ತಿತ್ವವನ್ನು ಪರಿಚಯಿಸಿದರು. ಕಾರ್ಯಕ್ರಮದಲ್ಲಿ ಎನ್‌ಡಿಆರ್‌ಐನ ನಿವೃತ್ತ ಪ್ರಧಾನ ವಿಜ್ಞಾನಿಗಳಾದ ಡಾ। ಸುರೇಂದ್ರನಾಥ್ ರವರು ಡೈರಿ ಉತ್ಪನ್ನಗಳ ಗುಣಮಟ್ಟ, ಸುರಕ್ಷತೆ ಹಾಗೂ ಪೋಷಕಾಂಶಗಳ ಕುರಿತು ವಿಚಾರಗೋಷ್ಠಿಯನ್ನು ನಡೆಸಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎನ್‌ಐಎಎನ್‌ಪಿಯ ನಿರ್ದೇಶಕರಾದ ಡಾ। ರಾಘವಭಟ್ ಅವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ಡಾ। ವರ್ಗೀಸ್ ಕುರಿಯನ್ ರವರ ಕುರಿತು ಕಿರು ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಹಾಗೂ ಸಂವಿಧಾನ ದಿನಾಚರಣೆಯ ಅಂಗವಾಗಿ ಪ್ರತಿಜ್ಞಾವಿಧಿ ಸ್ವೀಕಾರ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕರ್ನಾಟಕ ಸಹಕಾರ ಹಾಲು ಮಹಾಮಂಡಳಿಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಭಾರತದ ಕ್ಷೀರ ಪುರುಷನಿಗೆ ನೂರರ ಸಂಭ್ರಮ

**ಭಾ**ರತವು ವಿಶ್ವದಲ್ಲಿಯೇ ಅತಿ ಹೆಚ್ಚು ಪಶು ಸಂಪತ್ತನ್ನು ಹೊಂದಿರುವ ದೇಶವಾಗಿದ್ದರೂ ಹಿಂದೆ ಹಾಲಿನ ಕೊರತೆಯನ್ನು ಎದುರಿಸುತ್ತಾ ಬಂದಿತ್ತು, ಆದರೆ ಇಂದು ಭಾರತವು ವಿಶ್ವದಲ್ಲಿಯೇ ಅತಿ ಹೆಚ್ಚು ಹಾಲು ಉತ್ಪಾದನೆ ಮತ್ತು ಬಳಕೆಯ ರಾಷ್ಟ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಮಹತ್ಸಾಧನೆಯ ಹಿಂದೆ ಅಪ್ರತಿಮ ರಾಷ್ಟ್ರಪ್ರೇಮಿ ಡಾ॥ ವರ್ಗೀಸ್ ಕುರಿಯನ್ ಎಂಬ ಮಹತ್ಸಾಧಕನ ಅವಿರತ ಶ್ರಮವಿರುವುದನ್ನು ಕಾಣಬಹುದು. ಕೃಷಿ ಪ್ರಧಾನ ಭಾರತ ದೇಶದಲ್ಲಿಂದು ಉತ್ಪಾದಿಸಲಾಗುತ್ತಿರುವ ಆಹಾರೋತ್ಪನ್ನಗಳ ಪೈಕಿ ಪರಿಪೂರ್ಣ ಆಹಾರವೆಂದೇ ಪರಿಗಣಿತವಾಗಿರುವ ಹಾಲು ಮಹತ್ವದ ಸ್ಥಾನ ಪಡೆದುಕೊಂಡಿದೆಯಲ್ಲದೆ ದೇಶದ ಆರ್ಥಿಕತೆಗೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬಂದಿರುತ್ತದೆ.



**ಬೆಳೆಯುವ ಸಿರಿ ಮೊಳಕೆಯಲ್ಲಿ :**

ನವೆಂಬರ್ 26, 1921ರಂದು ಕೇರಳ ರಾಜ್ಯದ ಕಲ್ಲಿಕೋಟೆಯಲ್ಲಿ ಜನಿಸಿದ ಕುರಿಯನ್ ಈ ದೇಶಕಂಡ ಮಹಾನ್ ದೇಶಭಕ್ತರಲ್ಲೊಬ್ಬರಾಗಿದ್ದಾರೆ. ಪ್ರತಿಭಾಶಾಲಿ ಕುರಿಯನ್ ತನ್ನ ಬಾಲ್ಯದಿಂದಲೂ ಆಟ ಪಾಠಗಳಂತೆಯೇ, ಕ್ರೀಡಾ ಚಟುವಟಿಕೆಗಳಲ್ಲಿಯೂ ಸದಾ ಮುಂದಿರುತ್ತಿದ್ದರು. ತನ್ನ ತಂದೆ ಪುತೇನ್ ಪರಾಕ್ಕೆಲ್ ಅವರ ಕ್ರೀಡಾ ಪ್ರೇಮದ ಪ್ರೇರಣೆಯಿಂದಾಗಿ ಟೆನಿಸ್, ಬ್ಯಾಡ್ಮಿಂಟನ್, ಕ್ರಿಕೆಟ್ ಹಾಗೂ ಬಾಕ್ಸಿಂಗ್‌ಗಳಲ್ಲಿ ಉತ್ತಮ ಸಾಧನೆಗೈದುದಲ್ಲದೆ, ಕ್ಯಾಪ್ಟನ್ ತಿಮ್ಮಯ್ಯ ಅಡ್ವಕೆಂಟ್ ಆಗಿದ್ದ ಮದರಾಸು ಯೂನಿವರ್ಸಿಟಿಯಲ್ಲಿ ಟ್ರೇನಿಂಗ್ ಕೋಚ್ ಬೆಟಾಲಿಯನ್ನಿನ ಅತ್ಯುತ್ತಮ ಕೆಡೆಟ್ ಆಗಿಯೂ ಆಯ್ಕೆಯಾಗಿದ್ದನು. ಸೈನಿಕ ಜೀವನದ ಶಿಸ್ತು ಮತ್ತು ಕರಾರುವಕ್ಕುತನದಿಂದ ಪ್ರೇರೇಪಿತರಾಗಿ ಭಾರತೀಯ ಸೇನೆ ಸೇರುವ ಆಸೆ ಕುರಿಯನ್‌ರಲ್ಲಿ ಚಿಗುರೊಡೆದಿತ್ತು. ಆದರೆ ಅವರ ತಂದೆ ಕುರಿಯನ್‌ಗೆ ಇಪ್ಪತ್ತು ವರ್ಷಗಳಾಗಿರುವಾಗಲೇ ಅವರ ತಂದೆ ತೀರಿಕೊಂಡಿದ್ದರಿಂದಾಗಿ ತಾಯಿಯು ಅವರ ಆಸೆಗೆ ತಣ್ಣೀರೆರಚಿದ್ದಳು.

ಮದರಾಸಿನ ಲಾಯೊಲ ಕಾಲೇಜಿನಲ್ಲಿ ವಿಜ್ಞಾನ ಪದವಿಯೊಂದಿಗೆ ಗಿಂಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಲೋಹ ವಿಜ್ಞಾನದಲ್ಲಿ ಇಂಜಿನಿಯರಿಂಗ್ ಪದವಿಯನ್ನು ಅವಧಿಗೂ ಮೊದಲೇ ಕುರಿಯನ್ ಪಡೆಯುತ್ತಾರೆ. ಪ್ರತಿಭಾಶಾಲಿಯಾಗಿದ್ದ ಕುರಿಯನ್ ಪದವಿ ನಂತರ ಟಾಟಾ ಐರನ್ ಅಂಡ್ ಸ್ಟೀಲ್ ಕಂಪನಿಯಲ್ಲಿ ಗ್ರಾಜುಯೇಟ್ ಅಪ್ರೆಂಟಿಸ್ ಆಗಿ ತಮ್ಮ ವೃತ್ತಿ ಜೀವನ ಆರಂಭಿಸುತ್ತಾರೆ. ಸ್ವಾಭಿಮಾನಿಯಾಗಿದ್ದ ಕುರಿಯನ್ ಟಿಸ್ಕೋ ಕಂಪನಿಯಲ್ಲಿ ತನ್ನ ಸೋದರ ಜಾನ್‌ಮಥಾಯ್ ನಿರ್ದೇಶಕರಾಗಿದ್ದರಿಂದಾಗಿ ಅವರ ಹಂಗಿನಲ್ಲಿ ಕೆಲಸ ಮಾಡಲಿಚ್ಚಿಸದೆ ಉನ್ನತ ವ್ಯಾಸಂಗದ ಕಾರಣ ನೀಡಿ ತಮ್ಮ ಕೆಲಸಕ್ಕೆ ರಾಜಿನಾಮೆ ನೀಡುತ್ತಾರೆ.

ಉನ್ನತ ವ್ಯಾಸಂಗದ ಕನಸೊತ್ತಿದ್ದ ಕುರಿಯನ್ ಬ್ರಿಟಿಷ್ ಸರ್ಕಾರದ ವಿಶೇಷ ತರಬೇತಿ ಕಾರ್ಯಕ್ರಮದಡಿಯಲ್ಲಿ ಡೇರಿ ಇಂಜಿನಿಯರಿಂಗ್‌ನಲ್ಲಿ ಆಯ್ಕೆಗೊಂಡು ಅಮೆರಿಕಾದ ಮಿಶಿಗನ್ ವಿಶ್ವವಿದ್ಯಾಲಯದಲ್ಲಿ ತೋರಿಕೆಗಾಗಿ ಡೇರಿ ಇಂಜಿನಿಯರಿಂಗ್‌ನಲ್ಲಿ ಅಧ್ಯಯನ ಮಾಡಿ, ತಮ್ಮ ಆಸಕ್ತಿಯ ವಿಷಯಗಳಾಗಿದ್ದ ಲೋಹ ವಿಜ್ಞಾನ ಮತ್ತು ನ್ಯೂಕ್ಲಿಯರ್ ಫಿಸಿಕ್ಸ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆಯುತ್ತಾರೆ. ಕುರಿಯನ್ ತಮ್ಮ ಅಧ್ಯಯನದ ನಂತರ ಅಮೆರಿಕಾದಲ್ಲಿಯೇ ನೆಲೆಸಿ ಕೆಲಸ ಮಾಡಿದ್ದರೆ ಸಾಕಷ್ಟು ಹಣ ಮತ್ತು ಒಳ್ಳೆಯ ಹೆಸರನ್ನು ಗಳಿಸಬಹುದಾಗಿತ್ತು. ಆದರೆ ದೇಶಾಭಿಮಾನಿಯಾಗಿದ್ದ ಕುರಿಯನ್ ಉನ್ನತಭ್ಯಾಸದ ನಂತರ 1948ರಲ್ಲಿ ಭಾರತಕ್ಕೆ ಮರಳುತ್ತಾರೆ. ಕುರಿಯನ್ ತಮ್ಮ ಉನ್ನತ ವ್ಯಾಸಂಗ ಮುಗಿಸಿ ಭಾರತಕ್ಕೆ ವಾಪಸಾಗುವಷ್ಟರಲ್ಲಾಗಲೇ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿರುತ್ತದೆ. ಗುಜಾರಾತ್ ರಾಜ್ಯದ ಆನಂದ್‌ನಲ್ಲಿದ್ದ ಸರ್ಕಾರಿ ಕ್ರಿಮರಿಯಲ್ಲಿ ಕೆಲಸಕ್ಕೆ ನೇಮಿಸಿ ಸರ್ಕಾರ ಆದೇಶಿಸುತ್ತದೆ. ಆದರೆ ಕುರಿಯನ್‌ಗೆ ಆನಂದ್‌ನಲ್ಲಿ ಕೆಲಸ ಮಾಡಲು ಆಸಕ್ತಿಯಿರಲಿಲ್ಲ

**ಕುರಿಯನ್‌ಗಂಟಿದ ಆನಂದ್‌ನ ನಂಟು :**

ಸರ್ಕಾರ ಕುರಿಯನ್ ವಿದೇಶಿ ವ್ಯಾಸಂಗಕ್ಕಾಗಿ ಹಣ ನೀಡಿದ್ದರಿಂದಾಗಿ ಕಟ್ಟುಪಾಡಿಗೊಳಗಾಗಿದ್ದ ಕುರಿಯನ್ ಒಲ್ಲದ ಮನಸ್ಸಿನಿಂದಲೇ ಆನಂದ್‌ನಲ್ಲಿ ಕೆಲಸ ಮಾಡಲು ಸಮ್ಮತಿಸುತ್ತಾರೆ. ಕುರಿಯನ್ ಆನಂದ್‌ಗೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ ಇತರೆ ಗ್ರಾಮಗಳಂತೆ ಆನಂದ್ ಸಹ ಸಾಮಾನ್ಯ ಊರಾಗಿತ್ತು. ಅವರು ಕೆಲಸ ಮಾಡಬೇಕಾಗಿದ್ದ ಸರ್ಕಾರಿ ಕ್ರಿಮರಿ ತುಂಬಾ ಹಳೆಯದಾಗಿದ್ದರಿಂದಾಗಿ ಅದರಲ್ಲಿನ ಯಂತ್ರೋಪಕರಣಗಳು ಆಗಾಗ ಕೆಟ್ಟು ನಿಂತು ಸಮಸ್ಯೆ ಸೃಷ್ಟಿಗೆ ಕಾರಣವಾಗುತ್ತಿದ್ದವು. ಸರ್ಕಾರಿ ಕ್ರಿಮರಿಯ ಒಂದು ಭಾಗವನ್ನು ಉಪಪ್ರಧಾನಿಗಳಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲರು ಕೈರಾ ಒಕ್ಕೂಟಕ್ಕೆ ಹಸ್ತಾಂತರಿಸಿದ್ದರು. ಆದರೆ ಯಂತ್ರೋಪಕರಣಗಳು ಸದಾ ದುರಸ್ತಿಗೊಳಗಾಗುತ್ತಿದ್ದುದರಿಂದಾಗಿ ಒಕ್ಕೂಟದ ಉದ್ಯೋಗಿಗಳೂ ಸಹ ಅದರ ನಿರ್ವಹಣೆ ಮಾಡಲಾಗದೆ ಪರದಾಡುತ್ತಿದ್ದುದನ್ನು ಕುರಿಯನ್ ಗಮನಿಸುತ್ತಿದ್ದರು. ಹೊಸ ಯಂತ್ರೋಪಕರಣಗಳನ್ನು

ಖರೀದಿಸುವಂತೆ ಕುರಿಯನ್ ಸಲ್ಲಿಸುತ್ತಿದ್ದ ಕೋರಿಕೆಗೆ ಯಾವುದೇ ಮನ್ನಣೆಯೂ ಸಿಗುತ್ತಿರಲಿಲ್ಲ. ಹಾಗೂ ಸರ್ಕಾರಿ ಕ್ರಿಮರಿಯಲ್ಲಿನ ವ್ಯವಸ್ಥೆ ಅಸ್ತವ್ಯಸ್ತವಾಗುತ್ತಿದ್ದರಿಂದ ಬೇಸತ್ತು ಕುರಿಯನ್ ಕೆಲಸಕ್ಕೆ ರಾಜಿನಾಮೆ ನೀಡಿ ಕೆಲಸ ಹರಸಿ ಬಾಂಬೆಗೆ ಹೊರಡಲು ನಿರ್ಧರಿಸುತ್ತಾರೆ.

ಕುರಿಯನ್ ಆನಂದ್ ತೊರೆಯುವ ವಿಚಾರ ತಿಳಿಯುವ ಕೈರಾ ಒಕ್ಕೂಟದ ಅಧ್ಯಕ್ಷ ತ್ರಿಭುವನ್‌ದಾಸ್ ಪಟೇಲರು ಕುರಿಯನ್ ಮನವೊಲಿಸಿ ಒಕ್ಕೂಟದಲ್ಲಿ ಕೆಲಸ ಮಾಡಲು ಕೋರುತ್ತಾರೆ. ತ್ರಿಭುವನ್‌ದಾಸರ ಮಾತಿಗೆ ಕಟ್ಟುಬಿದ್ದ ಕುರಿಯನ್ ಕೈರಾ ಒಕ್ಕೂಟದಲ್ಲಿ ರೈತರ ಒಡನಾಟದಲ್ಲಿ ಕೆಲಸ ಮಾಡಲು ನಿರ್ಧರಿಸುತ್ತಾರೆ. ಆನಂದ್‌ನಲ್ಲಿ ಉಳಿದುಕೊಂಡು ರೈತರು ಹಾಗೂ ಸಹಕಾರಿ ಸಂಘದ ಒಡನಾಟದಲ್ಲಿ ದುಡಿಯುತ್ತಲೇ ಕುರಿಯನ್ ಅರಿತ ನಿತ್ಯಸತ್ಯವೆಂದರೆ, 'ನಮ್ಮ ಲಾಭಕ್ಕೆ ಮಾತ್ರ ನಾವು ದುಡಿಯುವಾಗ ಸಿಗುವ ಆನಂದ ತಾತ್ಕಾಲಿಕ; ಆದರೆ ನಾವು ಇತರರಿಗಾಗಿ ದುಡಿಯುವಾಗ ಆಳವಾದ ಸಾರ್ಥಕತೆಯ ಅನುಭವ ನಮಗಾಗುತ್ತದೆ. ಹಾಗೆಯೇ, ಎಲ್ಲವನ್ನೂ ಸಮರ್ಥವಾಗಿ ನಿಭಾಯಿಸಿದಾಗ ಸಾಕಷ್ಟು ಲಾಭ ಮತ್ತು ಯಶಸ್ಸು ಲಭಿಸುತ್ತದೆ.

ಕುರಿಯನ್ ವೃತ್ತಿಪರತೆ ಹಾಗೂ ದಕ್ಷ ಆಡಳಿತ ನಿರ್ವಹಣೆಯಿಂದಾಗಿ ಕೈರಾ ಒಕ್ಕೂಟವು ಕೇವಲ ನಾಲ್ಕೇ ವರ್ಷಗಳಲ್ಲಿ ಅಭೂತ ಪೂರ್ವ ಸಾಧನೆ ಮಾಡುತ್ತದೆ. ಆರಂಭದ 1948ರಲ್ಲಿ ಕೇವಲ 200 ಲೀಟರುಗಳಷ್ಟಿದ್ದ ಹಾಲಿನ ಶೇಖರಣೆ 1952 ರಷ್ಟರೊತ್ತಿಗೆ 20,000 ಲೀಟರುಗಳಿಗೇರಿರುತ್ತದೆ. ಒಕ್ಕೂಟದ ಅಭಿವೃದ್ಧಿಯೊಂದಿಗೆ ದಿನದಿಂದ ದಿನಕ್ಕೆ ಗಣನೀಯವಾಗಿ ವೃದ್ಧಿಸುತ್ತಿದ್ದ ಹಾಲಿನ ಉತ್ಪಾದನೆ, ಸಂಗ್ರಹಣೆ, ಸಂಸ್ಕರಣೆ ಹಾಗೂ ಮಾರಾಟ ಕೈರಾ ಒಕ್ಕೂಟಕ್ಕೆ ಸವಾಲಾಗತೊಡಗುತ್ತದೆ. ಅಂತಹ ಸವಾಲುಗಳನ್ನು ಸಮರ್ಥವಾಗಿ ನಿರ್ವಹಣೆ ಮಾಡಲು ಆಧುನಿಕ ತಂತ್ರಜ್ಞಾನವುಳ್ಳ ಡೇರಿಯ ಅವಶ್ಯಕತೆಯನ್ನು ಕುರಿಯನ್ ಮನಗಾಣುತ್ತಾರೆ. ಆದರೆ ಆಗತಾನೆ ಬೆಳವಣಿಗೆಯ ಹಂತದಲ್ಲಿದ್ದ ಒಕ್ಕೂಟಕ್ಕೆ ಹಣಕಾಸಿನ ಅವಶ್ಯಕತೆ, ತಾಂತ್ರಿಕ ನೈಪುಣ್ಯತೆ ಹಾಗೂ ವೃತ್ತಿಪರ ಜ್ಞಾನದ ವಿಸ್ತರಣೆಯ ಅಗತ್ಯತೆಗಳು ಮುನ್ನೆಲೆಗೆ ಬಂದು ನಿಲ್ಲುತ್ತವೆ.



**ಕರ್ನಾಟಕ ರಾಜ್ಯದಲ್ಲಿ 45 ಸಾವಿರಕ್ಕೂ ಅಧಿಕ ಸಹಕಾರ ಸಂಘಗಳಿವೆ. ಇವುಗಳಲ್ಲಿ 16 ಸಾವಿರಕ್ಕೂ ಅಧಿಕ ಹಾಲು ಉತ್ಪಾದಕ ಸಹಕಾರ ಸಂಘಗಳು, 14 ಜಿಲ್ಲಾ ಹಾಲು ಒಕ್ಕೂಟ ಮತ್ತು ರಾಜ್ಯ ಮಟ್ಟದಲ್ಲಿ ಕೆ.ಎಂ.ಎಫ್. ಉತ್ತಮ ಸೇವೆ ಸಲ್ಲಿಸುತ್ತಿವೆ. ರಾಜ್ಯದ ಸಹಕಾರ ಕ್ಷೇತ್ರದಲ್ಲಿ ಈ ವಲಯದ ಕೊಡುಗೆ ಶೇ. 40ರಷ್ಟು ಇದೆ ಎಂಬುದು ಸಂತಸದ ವಿಚಾರ.**


### ಪ್ರತಿ ಸವಾಲಿನೊಳಗೊಂದು ಅವಕಾಶ:


ಸಹಕಾರಿ ಸಂಘಗಳು ಹಾಗೂ ಒಕ್ಕೂಟದ ನಿರ್ವಹಣೆಯಲ್ಲಿ ನಿತ್ಯವೂ ಎದುರಾಗುತ್ತಿದ್ದ ಪ್ರತಿ ಸವಾಲಿನೊಳಗೂ ಒಂದು ಅವಕಾಶ ಸೃಷ್ಟಿಸಿಕೊಂಡು ಕೆಲಸ ಮಾಡುವ ಕಲೆಯನ್ನು ತಮ್ಮ ಅನುಭವದಿಂದ ಅಷ್ಟರಲ್ಲಾಗಲೇ ಕುರಿಯನ್ ಕರಗತ ಮಾಡಿಕೊಂಡಿದ್ದರು. ಹಾಲಿನ ಉತ್ಪಾದನೆ ಹೆಚ್ಚಾದಂತೆ ಅವರಿಗೆ ಎದುರಾಗುವ ಪ್ರಮುಖ ಸಮಸ್ಯೆಯೆಂದರೆ, ಗುಜರಾತಿನಲ್ಲಿ ಎಮ್ಮೆ ಹಾಲಿನಿಂದ ಹಾಲಿನ ಪುಡಿ ತಯಾರಿಸುವುದು.

ಕೇಂದ್ರ ಸರ್ಕಾರದ ಮನವೊಲಿಸಿ ವಿಶೇಷ ಅಧ್ಯಯನ ಕಾರ್ಯಕ್ರಮದಡಿಯಲ್ಲಿ ವಿದೇಶಿ ಪ್ರವಾಸ ಕೈಗೊಳ್ಳುವ ಕುರಿಯನ್ ನ್ಯೂಜಿಲೆಂಡ್, ಆಸ್ಟ್ರೇಲಿಯಾ, ಜರ್ಮನಿ, ಅಮೇರಿಕಾ ಮೊದಲಾದ ದೇಶಗಳಿಗೆ ಭೇಟಿ ನೀಡಿ ಡೇರಿ ತಂತ್ರಜ್ಞಾನದ ಬಗ್ಗೆ ಅಧ್ಯಯನ ನಡೆಸುತ್ತಾರೆ. ಎಮ್ಮೆ ಹಾಲಿನಿಂದ ಹಾಲಿನ ಪುಡಿ ತಯಾರಿಸುವ ಬಗ್ಗೆ ಅರಿಯಲೆತ್ನಿಸುವ ಕುರಿಯನ್ ಅವರಿಗೆ ಎಮ್ಮೆ ಹಾಲಿನಿಂದ ಹಾಲಿನ ಪುಡಿ ತಯಾರಿಸುವ ತಂತ್ರಜ್ಞಾನದ ಬಗ್ಗೆ ಮಾಹಿತಿ ಲಭಿಸುವುದಿಲ್ಲ. ಎಮ್ಮೆ ಹಾಲಿನ ಪುಡಿ ತಯಾರಿಸುವುದು ಅಸಾಧ್ಯವೆಂಬುದೇ ವಿಶ್ವದ ಬಹುತೇಕ ಡೇರಿ ತಂತ್ರಜ್ಞರ ಒಟ್ಟಾರೆ ಅಭಿಪ್ರಾಯವಾಗಿರುತ್ತದೆ. ಇದನ್ನು ಸವಾಲಾಗಿ ಸ್ವೀಕರಿಸುವ ಕುರಿಯನ್ ಭಾರತಕ್ಕೆ ಹಿಂತಿರುಗಿದ ನಂತರ ಡೇರಿ ತಂತ್ರಜ್ಞರಾಗಿದ್ದ ಹರಿಲಾಲ್ ದಲಾಯ ಅವರ ಸಹಕಾರದೊಂದಿಗೆ ಎಮ್ಮೆ ಹಾಲಿನ ಪುಡಿ ತಯಾರಿಸುವ ತಂತ್ರಜ್ಞಾನ ಅಭಿವೃದ್ಧಿಪಡಿಸುವಲ್ಲಿ ಯಶಸ್ಸು ಕಾಣುತ್ತಾರೆ.

ಹೊಸ ತಂತ್ರಜ್ಞಾನದ ನೆರವಿನಿಂದ ಸಹಕಾರಿ ಕ್ಷೇತ್ರದ ಪ್ರಥಮ ಡೇರಿ ನಿರ್ಮಾಣಕ್ಕೆ ಅಂದಿನ ರಾಷ್ಟ್ರಪತಿಯವರಿಂದ ಶಂಕುಸ್ಥಾಪನೆ ಮಾಡಿಸಲಾಗುತ್ತದೆ. ಸರ್ದಾರ್ ಪಟೇಲರ ಪುತ್ರಿ ಮಣಿಬೆನ್ ಆಶಯದಂತೆ ಪಟೇಲರ ಜನ್ಮದಿನವಾಗಿದ್ದ ಅಕ್ಟೋಬರ್ 31, 1955 ರಂದು ಡೇರಿಯನ್ನು ಪ್ರಧಾನಿ ಜವಹರಲಾಲ್ ನೆಹರೂ ಅವರಿಂದ ಉದ್ಘಾಟನೆ ಮಾಡಿಸಲು ತೀರ್ಮಾನಿಸಲಾಗಿರುತ್ತದೆ. ಕೇವಲ ಒಂದು ವರ್ಷದ ಕಾಲಾವಧಿಯೊಳಗಾಗಿ ಡೇರಿ ನಿರ್ಮಾಣ ಕಾರ್ಯ ಪೂರ್ಣಗೊಳಿಸುವ ಕುರಿಯನ್ ಹೊಸ ದಾಖಲೆಯನ್ನೇ ನಿರ್ಮಿಸುತ್ತಾರೆ. ಡೇರಿ ಲೋಕಾರ್ಪಣೆ ಮಾಡಿದ ನೆಹರೂ "ಕುರಿಯನ್, ನಿಜವಾಗಿಯೂ ನಮ್ಮ ದೇಶ ಯಾವುದನ್ನು ಸಾಧಿಸಲಾಗುವುದಿಲ್ಲವೆಂದು ಭಾವಿಸಿತ್ತೋ ಅದರತ್ತ ಮುನ್ನುಗ್ಗಿ ಸಾಧಿಸುವ ನಿಮ್ಮಂತಹ ಸಾಧಕರನ್ನು ಹೊಂದಿರುವುದು ನನಗೆ ಅತೀವ ಸಂತೋಷ ತಂದಿದೆ" ಎಂದು ಪ್ರಶಂಸಿಸುತ್ತಾರೆ.

ಆಧುನಿಕ ಡೇರಿಯಿಂದಾಗಿ ಕೈರಾ ಒಕ್ಕೂಟದ ಹಾಲಿನ ಸಂಸ್ಕರಣೆ ಹಾಲಿನ ಉತ್ಪನ್ನಗಳ ಮಾರಾಟದಲ್ಲಿ ಗಣನೀಯ ಪ್ರಗತಿ ಸಾಧ್ಯವಾಗುತ್ತದೆ. ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟ ಜಾಲ ವಿಸ್ತರಣೆಗೆ ಪ್ರಚಾರ ಮತ್ತು ಜಾಹಿರಾತಿನ ಅಗತ್ಯತೆ ಮನಗಂಡ ಕುರಿಯನ್ ಸರ್ವರಿಗೂ ಒಪ್ಪಿತವಾಗುವ 'ಅಮೂಲ್' ಎಂಬ ಕಾರ್ಪೊರೇಟ್ ಬ್ರಾಂಡ್‌ನ್ನು ಹೆಸರಿಸಿ ನೋಂದಣಿ ಮಾಡಲಾಗುತ್ತದೆ. ಸಹಕಾರಿ ಸಂಘಗಳು ವ್ಯಾಪಾರಿ ಉದ್ಯಮವಾದಾಗ ಮಾತ್ರ ಲಾಭದಾಯಕವಾಗಿ ಬೆಳವಣಿಗೆ ಹೊಂದಲು ಸಾಧ್ಯವೆಂದು ಕುರಿಯನ್ ಅಭಿಮತವಾಗಿತ್ತು.





ಇತರೆ ಉದ್ಯಮಗಳಂತೆ ಕೇವಲ ಲಾಭ ಹೆಚ್ಚಿಸಿಕೊಂಡು ಅಭಿವೃದ್ಧಿ ಹೊಂದುವ ಉದ್ದೇಶಗಳಿಲ್ಲದಿದ್ದರೂ ಅಮೂಲ್ ಉತ್ಪಾದಿಸಿದ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ತಾವೇ ಬೆಲೆ ನಿಗದಿಪಡಿಸಿಕೊಳ್ಳುವ ಮೂಲಕ ಸಹಕಾರಿ ಹೈನುಗಾರಿಕೆ ದೇಶದಲ್ಲಿ ಹೈನೋದ್ಯಮದ ರೂಪ ಪಡೆಯಲು ಸಾಧ್ಯವಾಯಿತು. ಇದರಿಂದಾಗಿ ಹಾಲಿನಿಂದ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಿ ವ್ಯವಸ್ಥಿತ ಮಾರಾಟದ ಮೂಲಕ ರೈತರಿಗೆ ಮತ್ತು ಗ್ರಾಹಕರಿಗೆ ಹೆಚ್ಚೆಚ್ಚು ಲಾಭ ಸಿಗುವಂತೆ ಮಾಡುವ ಕುರಿಯನ್ ಅವರ ಕನಸು ಸಾಕಾರಗೊಂಡಿರುವುದನ್ನು ಕಾಣಬಹುದು.

ಕುರಿಯನ್ ಅವರ ಕಾರ್ಯ ಬದ್ಧತೆಯಂತೆಯೇ ಅವರ ದೇಶ ಪ್ರೇಮ ಪ್ರಶ್ನಾತೀತವಾಗಿತ್ತು. 1962ರ ಚೀನಾ ಯುದ್ಧದ ಸಂದರ್ಭದಲ್ಲಿ ಭಾರತೀಯ ಸೇನೆಗೆ ತುರ್ತಾಗಿ ಅಗತ್ಯವಿದ್ದ ಸುಮಾರು 2750 ಟನ್ ಹಾಲಿನ ಪುಡಿ ಸರಬರಾಜು ಮಾಡುವಂತೆ ಕೋರಿಕೆ ಬಂದಿತ್ತು. ಆದರೆ ಅಂದಿನ ಪರಿಸ್ಥಿತಿಯಲ್ಲಿ ಅಷ್ಟೊಂದು ಪ್ರಮಾಣದ ಹಾಲಿನ ಪುಡಿ ಉತ್ಪಾದನಾ ಸಾಮರ್ಥ್ಯ ಅಮೂಲ್ ಡೇರಿಗಳಿಗಿರಲಿಲ್ಲ. ಆದರೆ ಇದನ್ನೊಂದು ಸವಾಲಾಗಿ ಸ್ವೀಕರಿಸುವ ಕುರಿಯನ್ ದೇಶದಲ್ಲಿನ ರಾಜ್‌ಕೋಟ್ ಡೇರಿಯು ಸೇರಿದಂತೆ ಎಲ್ಲಾ ಮೂಲಸೌಕರ್ಯಗಳನ್ನೂ ಬಳಸಿಕೊಂಡು ಅಗತ್ಯವಿರುವ ಹಾಲಿನ ಪುಡಿಯನ್ನು ಸರಬರಾಜು ಮಾಡುವ ವಾಗ್ದಾನವನ್ನು ಸೇನಾಧಿಕಾರಿಗಳಿಗೆ ನೀಡುತ್ತಾರೆ. ಕುರಿಯನ್ ಅವರ ಬದ್ಧತೆ ಮತ್ತು ಸಾಹಸವನ್ನು ಮೆಚ್ಚುವ ಹಿರಿಯ ಸೇನಾಧಿಕಾರಿ ಶಿವರಾಮನ್ ಸರ್ಕಾರದಿಂದ ಯಾವುದೇ ಸಹಾಯ, ಸಾಲ ನೆರವಿನ ಅವಶ್ಯಕತೆಯಿದ್ದಲ್ಲಿ ಸಂಕೋಚವಿಲ್ಲದೆ ಕೇಳಬಹುದೆಂದು ತಿಳಿಸುತ್ತಾರೆ. ಶಿವರಾಮನ್ ಮಾತಿನಿಂದ ಬೇಸರಗೊಳ್ಳುವ ಕುರಿಯನ್, "ಮಿ. ಶಿವರಾಮನ್, ಇದು ಯುದ್ಧ ಸಮಯದ ತುರ್ತುಸ್ಥಿತಿಯ ಸಂದರ್ಭವೆಂದು ತಿಳಿಸಿದ್ದೀರಿ. ಇಂತಹ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ಹಣ ಕೇಳಲು ಹೊರಟರೆ, ನಮ್ಮ ಅಮೂಲ್ ಸಂಸ್ಥೆಯ ಗೌರವ ಮಣ್ಣುಪಾಲಾಗುವುದಿಲ್ಲವೇ?" ಎಂದು ಖಾರವಾಗಿ ಪ್ರತಿಕ್ರಿಯಿಸುತ್ತಾರೆ.

ಪಶು ಆರೋಗ್ಯ ಮತ್ತು ಹಾಲಿನ ಗುಣಮಟ್ಟ ಸುಧಾರಣೆಯ ಗುರಿಯೊಂದಿಗೆ ಅಂದಿನ ಕಾಲಕ್ಕೆ ರಾಷ್ಟ್ರದಲ್ಲಿಯೇ ಪ್ರಥಮವೆನ್ನಬಹುದಾಗಿದ್ದ ಪಶು ಆಹಾರ ತಯಾರಿಕಾ ಘಟಕವನ್ನು 1964 ರಲ್ಲಿ ನಿರ್ಮಿಸಿ ಅದರ ಲೋಕಾರ್ಪಣೆಗೆ ಪ್ರಧಾನಮಂತ್ರಿ ಲಾಲ್‌ಬಹದ್ದೂರ್ ಶಾಸ್ತ್ರಿಯವರನ್ನು ಆಮಂತ್ರಿಸಲಾಗಿರುತ್ತದೆ. ಪಶು ಆಹಾರ ಘಟಕದ ಉದ್ಘಾಟನೆಗೆ ಒಂದು ದಿನ ಮೊದಲೇ ಆನಂದ್‌ಗೆ ಬಂದಿಳಿದು ಹಳ್ಳಿಯ ರೈತರೊಬ್ಬರ ಮನೆಯಲ್ಲಿ ವಾಸ್ತವ್ಯ ಮಾಡಿದ್ದ ಶಾಸ್ತ್ರೀಜಿ ಅಮೂಲ್‌ನ ಯಶಸ್ಸಿನ ಬಗ್ಗೆ ತಿಳಿಯುವ ಪ್ರಯತ್ನ ಮಾಡಿರುತ್ತಾರೆ. ರೈತರೊಂದಿಗಿನ ಒಡನಾಟ ಮತ್ತು ಕುರಿಯನ್ ಅವರೊಂದಿಗಿನ ಚರ್ಚೆಯಿಂದ ಅಮೂಲ್‌ನ ಯಶಸ್ಸಿಗೆ ರೈತರಿಂದ ರೈತರಿಗಾಗಿ ರೈತರೇ ನಿರ್ವಹಿಸುತ್ತಿರುವ ಆನಂದ್ ಮಾದರಿ ಕಾರಣವೆಂಬ ಅರಿವು ಅವರಿಗಾಗಿರುತ್ತದೆ. ಹಾಗಾಗಿಯೇ ಕುರಿಯನ್ ಅವರನ್ನು ಕೇವಲ ಗುಜರಾತಿಗೆ ಸೀಮಿತವಾಗಿರದೆ ದೇಶದಾದ್ಯಂತ ಈ ಯಶಸ್ವಿ ಮಾದರಿ ವಿಸ್ತರಿಸಲು ಕೋರುತ್ತಾರೆ. ಆನಂದ್ ಮಾದರಿ ಅನುಷ್ಠಾನಕ್ಕಾಗಿ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ ಸ್ಥಾಪಿಸಲು ನಿರ್ಧರಿಸಲಾಗುತ್ತದೆ. ಆದರೆ ಮಂಡಳಿ ರಚಿಸಲು ಕೆಲವು ಷರತ್ತುಗಳನ್ನು ಶಾಸ್ತ್ರೀಜಿಯವರಿಗೆ ಕುರಿಯನ್ ವಿಧಿಸುತ್ತಾರೆ. ಮೊದಲನೆಯದಾಗಿ, ಸರ್ಕಾರ ರಚಿಸುವ ಹೈನು ಅಭಿವೃದ್ಧಿ ಮಂಡಳಿಯ ಪ್ರಧಾನ ಕಚೇರಿ ದೆಹಲಿಯಲ್ಲಿರದೆ ಆನಂದ್‌ನಲ್ಲಿರಬೇಕು, ಕಾರಣವೆಂದರೆ ದೆಹಲಿಯಲ್ಲಿನ ಆಡಳಿತ ವರ್ಗಕ್ಕೆ ಯಾವುದೇ ರೈತಪರ ಚಿಂತನೆಗಳಿರುವುದಿಲ್ಲ ಆದರೆ ನಾವು ಇಲ್ಲಿ ರೈತರ ಹಿತಚಿಂತನೆ ಹೊರತುಪಡಿಸಿ ಬೇರೆ ವಿಚಾರಗಳಲ್ಲಿ ನಮಗೆ ಆಸಕ್ತಿಗಳಿರುವುದಿಲ್ಲ. ಎರಡನೆಯ ಷರತ್ತೆಂದರೆ ತಾನೆಂದೂ ಸರ್ಕಾರದ ಉದ್ಯೋಗಿಯಾಗಿರಲಿಚ್ಚಿಸದೆ, ರೈತರ ಉದ್ಯೋಗಿಯಾಗಿರಬಯಸುವುದು ಹಾಗೂ ತಾವು ಮಾಡುವ ಕೆಲಸಕ್ಕೆ ಸರ್ಕಾರದಿಂದ ಬಿಡಿಗಾಸು ಸಂಬಳವನ್ನು ನಿರೀಕ್ಷಿಸುವುದಿಲ್ಲವೆಂಬುದು ಅವರ ಮತ್ತೊಂದು ಷರತ್ತಾಗಿತ್ತು. ಕುರಿಯನ್ ಅವರ ರೈತಪರ ಚಿಂತನೆ, ಬದ್ಧತೆ ಹಾಗೂ ಪ್ರಾಮಾಣಿಕತೆಯನ್ನು ಮೆಚ್ಚಿದ ಶಾಸ್ತ್ರೀಜಿ ಅವರ ಷರತ್ತುಗಳನ್ನು ಒಪ್ಪಿಕೊಳ್ಳುತ್ತಾರೆ.

### ಆಪರೇಷನ್ ಫ್ಲಡ್ ಎಂಬ ಹೈನೋದ್ಯಮದ ಆಯುಧ :

ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ ಮೂಲಕ ಆನಂದ್ ಮಾದರಿಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕುರಿಯನ್ 'ಆಪರೇಷನ್ ಫ್ಲಡ್' ಎಂಬ ಕ್ರಾಂತಿಕಾರಿ ಯೋಜನೆಯೊಂದನ್ನು ಸಿದ್ದಪಡಿಸುತ್ತಾರೆ. ಆದರೆ ಅದಕ್ಕೆ ಅಗತ್ಯವಿದ್ದ ಸುಮಾರು 650 ಕೋಟಿ ರೂಪಾಯಿಗಳ ಹಣಕಾಸು ನೆರವು ಸರ್ಕಾರದಿಂದ ಲಭಿಸುವುದರ ಬಗ್ಗೆ ಅನುಮಾನವಿರುತ್ತದೆ. ಈ ಹಣಕಾಸು ಹೊಂದಿಸಲು ಕುರಿಯನ್ ಉಪಾಯವೊಂದನ್ನು ಮಾಡುತ್ತಾರೆ. ಮುಂದುವರೆದ ದೇಶಗಳಲ್ಲಿ ಉತ್ಪಾದನೆಯಾಗುತ್ತಿದ್ದ ಹೆಚ್ಚುವರಿ ಆಹಾರ ಧಾನ್ಯಗಳನ್ನು ಅಭಿವೃದ್ಧಿ

## ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ (NDDB) :




ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ (ಎನ್‌ಡಿಡಿಬಿ) ಆರಂಭಿಸಲು ಅಗತ್ಯವಿದ್ದ ಕುರ್ಚಿ, ಮೇಜು, ಬೆರಳಚ್ಚು ಯಂತ್ರಗಳಂತಹ ಮೂಲಭೂತ ಸೌಕರ್ಯಗಳಿಗಾಗಿ ಕುರಿಯನ್ ಸಲ್ಲಿಸಿದ್ದ ಕೇವಲ ಮೂವತ್ತು ಸಾವಿರ ರೂಪಾಯಿಗಳ ಹಣಕಾಸಿನ ನೆರವೂ ಕೇಂದ್ರ ಸರ್ಕಾರದಿಂದ ಸಿಗುವುದಿಲ್ಲ. ಪ್ರಧಾನ ಮಂತ್ರಿಯವರ ಸೂಚನೆಯ ನಂತರವೂ ಕೃಷಿ ಸಚಿವಾಲಯದ ಅಧಿಕಾರಿ ವರ್ಗ ಎನ್‌ಡಿಡಿಬಿ ಸ್ಥಾಪನೆಗೆ ಹಲವಾರು ತಕರಾರುಗಳನ್ನು ತೆಗೆದು ಹಣಕಾಸಿನ ನೆರವು ನೀಡಲು ಅಡ್ಡಿಪಡಿಸುತ್ತದೆ. ಇದರಿಂದ ಬೇಸರಗೊಂಡರೂ ಧೃತಿಗೆಡದೆ ಕುರಿಯನ್ ಕೈರಾ ಆಡಳಿತ ಮಂಡಳಿಯ ಮನವೊಲಿಸಿ ಎನ್‌ಡಿಡಿಬಿ ಸ್ಥಾಪನೆಗೆ ಹಣಕಾಸಿನ ವ್ಯವಸ್ಥೆ ಮಾಡುತ್ತಾರಲ್ಲದೆ ಒಕ್ಕೂಟದ ಆವರಣದಲ್ಲಿಯೇ ಅದರ ಕಚೇರಿಯನ್ನು ಆರಂಭಿಸುತ್ತಾರೆ. ಇಂತಹ ಹಲವಾರು ಸಮಸ್ಯೆ ಸವಾಲುಗಳನ್ನು ಎದುರಿಸುತ್ತಲೇ ಕುರಿಯನ್ ಅರಿತ ಸತ್ಯವೆಂದರೆ, ಸರ್ಕಾರಗಳು ಕೇವಲ ಆಡಳಿತ ನಡೆಸುವುದಕ್ಕಷ್ಟೇ ಸೀಮಿತವಾಗಿರಬೇಕೇ ಹೊರತು ಅವುಗಳು ಡೇರಿ ನಿರ್ವಹಣೆ ಮತ್ತು ವ್ಯಾಪಾರಕ್ಕಿಳಿಯಬಾರದು.

ಹೊಂದಿದ ಮತ್ತು ಬಡದೇಶಗಳಿಗೆ ಉಚಿತವಾಗಿ ವಿತರಿಸಿ ತಮ್ಮ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುವ ಚಿಂತನೆಯನ್ನು ಯೂರೋಪಿಯನ್ ದೇಶಗಳು ಮಾಡುತ್ತಿದ್ದವು. ಇದನ್ನರಿತ ಕುರಿಯನ್ ಆ ದೇಶಗಳಿಂದ ನೀಡಲಾಗುತ್ತಿದ್ದ ಹಾಲಿನ ಪುಡಿಯನ್ನು ಪಡೆದು ಹಾಲನ್ನಾಗಿ ಪರಿವರ್ತಿಸಿ ಅದರ ಮಾರಾಟದಿಂದ ಬರುವ ಹಣದಿಂದ ದೇಶದಾದ್ಯಂತ ಹೈನೋದ್ಯಮ ವಿಸ್ತರಣೆಗಾಗಿ ಯೋಜನೆ ರೂಪಿಸುತ್ತಾರೆ.

1970ರಲ್ಲಿ ಆರಂಭವಾದ 'ಆಪರೇಷನ್ ಫ್ಲಡ್' ಯೋಜನೆ ಭಾರತದ ಸಹಕಾರಿ ಹೈನೋದ್ಯಮ ಅಭಿವೃದ್ಧಿಯಲ್ಲಿ ಕ್ರಾಂತಿಯನ್ನೇ ಮಾಡಿದೆ. ಮೂರು ಹಂತದ ಈ ಯೋಜನೆಯಡಿಯಲ್ಲಿ ಸಹಕಾರಿ ಹೈನೋದ್ಯಮದ ಪ್ರಗತಿಗೆ ಭದ್ರಬುನಾದಿ ಹಾಕಲಾಗಿದೆಯಲ್ಲದೆ, ಭಾರತದಲ್ಲಿನ ಹಾಲಿನ ಕೊರತೆಯನ್ನು ನೀಗಿಸಿ ಗ್ರಾಮೀಣ ಜನರ ಬದುಕು ಹಸನಾಗಿಸುವಲ್ಲಿ ಒಂದು ವಜ್ರಾಯುಧವಾಗಿ ಕೆಲಸ ಮಾಡಿದೆ. ಕರ್ನಾಟಕ ರಾಜ್ಯದಲ್ಲಿಯೂ ಈ ಯೋಜನೆಯ ವಿವಿಧ ಹಂತಗಳಲ್ಲಿ ಗ್ರಾಮ ಮಟ್ಟದಲ್ಲಿ 'ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘ' ಜಿಲ್ಲಾ ಮಟ್ಟದ ಜಿಲ್ಲಾ ಹಾಲು ಒಕ್ಕೂಟ ಹಾಗೂ ರಾಜ್ಯ ಮಟ್ಟದಲ್ಲಿ ಕರ್ನಾಟಕ ಹಾಲು ಮಹಾಮಂಡಳಿ ರಚನೆಗೊಂಡು ರಾಜ್ಯದ ಸುಮಾರು 25 ಲಕ್ಷ ರೈತ ಕುಟುಂಬಗಳು ಸ್ವಾವಲಂಬಿ ಬದುಕು ಕಟ್ಟಿಕೊಂಡು ಸಮೃದ್ಧಿ ಜೀವನ ನಡೆಸುವಂತಾಗಲು ಹಗಲಿರುಳು ಶ್ರಮಿಸುತ್ತಿವೆ. ಸಾಧನೆಯ ಹಾದಿಯಲ್ಲಿ ಎದುರಾಗುತ್ತಿದ್ದ ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸುತ್ತಲೇ ರೈತರ ಜೀವನಾಡಿಯಾಗಿರುವ ಹೈನುಗಾರಿಕೆಯ ತಳಹದಿಯ ಮೇಲೆ ಸಹಕಾರಿ ಹೈನೋದ್ಯಮವನ್ನು ಕಟ್ಟಿ ಬೆಳೆಸಿದ ಖ್ಯಾತಿ ಕುರಿಯನ್ ಅವರಿಗೆ ಸಲ್ಲಬೇಕು. ತಮ್ಮ ವೃತ್ತಿಪರತೆ ಮತ್ತು ಬದ್ಧತೆಯಿಂದ ಛಲಬಿಡದ ತ್ರಿವಿಕ್ರಮನಂತೆ ಹಗಲಿರುಳು ದುಡಿಯುತ್ತಲೇ ಗ್ರಾಮೀಣ ಭಾರತದ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸಿದ ಕುರಿಯನ್ ಅವರ ಭಾರತದ ಬಹುದೊಡ್ಡ ರತ್ನವೆಂದೇ ಹೇಳಬಹುದು. ಅವರ ಸಾಧನೆಯನ್ನರಸಿ ಹಲವಾರು ಪ್ರಶಸ್ತಿಗಳು ಅವರ ಮುಡಿಗೇರಿವೆ. 1963ರಲ್ಲಿ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ, ವಾಟ್‌ಲರ್ ಶಾಂತಿ ಪ್ರಶಸ್ತಿ (1986), ವಿಶ್ವ ಆಹಾರ ಪ್ರಶಸ್ತಿ (1989), ಪದ್ಮಶ್ರೀ ಪ್ರಶಸ್ತಿ (1965), ಪದ್ಮ ಭೂಷಣ (1966) ಹಾಗೂ 1999ರಲ್ಲಿ ಪದ್ಮ ವಿಭೂಷಣ ಪ್ರಶಸ್ತಿಗೆ ಭಾಜನರಾಗಿದ್ದ ಕುರಿಯನ್ ಅವರಿಗೆ 'ಭಾರತ ರತ್ನ' ಪ್ರಶಸ್ತಿ ನೀಡಬೇಕೆಂಬ ಅಸಂಖ್ಯ ಭಾರತೀಯರ ಕನಸು ಕನಸಾಗಿಯೇ ಉಳಿಯಿತು.



ಆದರೆ ಕುರಿಯನ್ ಎಂದೂ ಗೌರವ, ಪ್ರಶಸ್ತಿಗಳಿಗಾಗಿ ದುಡಿದವರಲ್ಲ, ಸಮೃದ್ಧ ಭವ್ಯಭಾರತದ ನಿರ್ಮಾಣಕ್ಕಾಗಿ ಅವಿರತವಾಗಿ ಶ್ರಮಿಸಿದವರು. ರತನ್‌ಟಾಟಾ ಅವರ ಮಾತಿನಲ್ಲಿಯೇ ಹೇಳುವುದಾದರೆ – 'ಒಬ್ಬ ಕುರಿಯನ್ ದೇಶದ ಅಭಿವೃದ್ಧಿಯಲ್ಲಿ ಇಷ್ಟೊಂದು ಸಾಧನೆ ಮಾಡಿರುವುದು ನಿಜಕ್ಕೂ ಅಚ್ಚರಿ ತರುತ್ತದೆ.

ಡಾ॥ ಕುರಿಯನ್ ರಂತಹ ಸಮರ್ಪಣ ಮತ್ತು ರಾಷ್ಟ್ರೀಯತೆಯ ಕಿಚ್ಚುಹೊಂದಿದ ಒಂದು ಸಾವಿರ ಮಂದಿಯನ್ನು ಹೊಂದಿದ್ದರೆ ಇಂದಿನ ಭಾರತ ಹೇಗಿರುತ್ತಿತ್ತು ಎಂದು ನಾವು ಅಚ್ಚರಿಪಡುವಂತಾಗಿದೆ ಎಂದು ಪ್ರಶಂಸಿದ್ದಾರೆ. ಹೈನೋದ್ಯಮದ ಪಿತಾಮಹಾರಾಗಿ ಅಂತಹ ಸಾಧನೆಯ ಶಿಖರ ಪ್ರಾಯದಂತಿರುವ ಡಾ॥ ವರ್ಗೀಸ್ ಕುರಿಯನ್ ಅವರ ಜನ್ಮಶತಮಾನೋತ್ಸವದ ಸಂಭ್ರಮದ ಸಂದರ್ಭದಲ್ಲಿ ಕ್ಷೀರ ಕ್ರಾಂತಿಯ ಹಾರಿಕಾರನನ್ನು ಭಾರತೀಯರು ಅದರಲ್ಲಿಯೂ ಸಹಕಾರಿ ಬಂಧುಗಳು ಕೃತಜ್ಞತೆಯಿಂದ ಸ್ಮರಿಸಬೇಕು.

– **ಕೆ.ಎಸ್. ರಂಗೇಗೌಡ,** ಹಿರಿಯ ಉಪ ನಿರ್ದೇಶಕರು (ನಿ),
ಕರ್ನಾಟಕ ಹಾಲು ಮಹಾಮಂಡಳಿ



# ಸಹಕಾರ ಸಂಘಗಳಲ್ಲಿ ವಾರ್ಷಿಕ ಮಹಾಸಭೆ ಇದರ ಪ್ರಾಮುಖ್ಯತೆ

▸▸ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿ), ಬೆಂಗಳೂರು

**ಸಹಕಾರ ಸಂಘಗಳ ಯಜಮಾನರು ಅದರ ಸದಸ್ಯರು, ಅದರ ಗ್ರಾಹಕರು, ಫಲಾನುಭವಿಗಳೂ ಅವರೇ. ಇದೊಂದು ಸಹಕಾರದ ವೈಶಿಷ್ಟ್ಯ. ಈ ವ್ಯಾಖ್ಯೆಯ ದಿಟವಾದ ಅರಿವು ಆ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಎಷ್ಟು ಸಮರ್ಥವಾಗಿ ಸಶಕ್ತತೆಯಿಂದ ನಡೆಯುತ್ತದೆ ಎಂಬುದರಿಂದ ತಿಳಿಯಬಹುದು. ವಾರ್ಷಿಕ ಮಹಾಸಭೆಯು ಕೇವಲ ಒಂದು ಆಚರಣೆ, ಶಾಸನಬದ್ಧ ಅವಶ್ಯಕತೆ ಎಂದು ನಡೆಯದೇ ವಾರ್ಷಿಕ ಮಹಾಸಭೆ ನಡೆಸಬೇಕಾದ ಆಡಳಿತ ಮಂಡಳಿ ಜವಾಬ್ದಾರಿಯುತವಾಗಿ, ಅರ್ಥಬದ್ಧವಾಗಿ ತಾವು ಸದಸ್ಯರಿಗೆ ಹೊಣೆಗಾರರು ಎಂಬ ಅರಿವಿನೊಡನೆ ನಡೆಸುವುದು ಮತ್ತು ಸದಸ್ಯರು ಪ್ರಜ್ಞಾವಂತರಾಗಿ ಪಾಲ್ಗೊಂಡು, ಜವಾಬ್ದಾರಿಯುತವಾಗಿ ನಡೆದುಕೊಂಡು ಸಂಘದ ಪ್ರಗತಿಗೆ ಕಾರಣರಾದರೆ ವಾರ್ಷಿಕ ಮಹಾಸಭೆಯ ಉದ್ದೇಶವು ಸಫಲವಾದಂತಾಗುತ್ತದೆ.**

ಪ್ರತಿ ಸಹಕಾರ ಸಂಘವು ತನ್ನ ವಾರ್ಷಿಕ ಮಹಾಸಭೆ, ಸರ್ವ ಸದಸ್ಯರ ಸಭೆ, ಸಾಮಾನ್ಯ ನಿಕಾಯದ ಸಭೆಯನ್ನು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಕಲಂ 27 ರನ್ವಯ ಸೆಪ್ಟೆಂಬರ್ 25 ರ ಒಳಗೆ ನಡೆಸಬೇಕಾದ್ದು ಕಡ್ಡಾಯ. ಇದರ ಹೊಣೆಗಾರಿಕೆ ಆಡಳಿತ ಮಂಡಳಿಯದು (ಕಲಂ 28(i)) ಒಂದು ಸಮಯ ವಿಫಲರಾದಲ್ಲಿ (ಕ.ರಾ.ಸ.ಸಂ. ಕಲಂ 29ಸಿ 3(ಬಿ)) ನಿರ್ದೇಶಕರು ಅನರ್ಹತೆಗೂ ಮತ್ತು ಆಡಳಿತ ಮಂಡಳಿಯನ್ನು (ಕಲಂ) ರದ್ಧತಿ ಅಥವಾ ಅಮಾನತ್ತಿನಲ್ಲಿಡಬಹುದಾಗಿದೆ. 2020–21ನೆ ಸಾಲಿನ ವಾರ್ಷಿಕ ಮಹಾಸಭೆಯನ್ನು ಕೋವಿಡ್–19 ಕಾರಣಕ್ಕಾಗಿ ಡಿಸೆಂಬರ್ 31 ರವರೆಗೆ ನಡೆಸಲು ಸರ್ಕಾರವು ತನಗೆ ಕಲಂ 121 ರಲ್ಲಿ ನಿಹಿತವಾದ ಅಧಿಕಾರದಂತೆ ಕಾಲಾವಕಾಶ ನೀಡಿದೆ. ಅಲ್ಲದೆ ವಿದ್ಯುನ್ಮಾನ ಮತ್ತು ಭೌತಿಕವಾಗಿ ಸಭೆ ನಡೆಸಲು ಅವಕಾಶ ನೀಡಿರುತ್ತದೆ.

ವಾರ್ಷಿಕ ಮಹಾಸಭೆಯಲ್ಲಿ ಮಂಡಿಸಬೇಕಾದ ವಿಷಯಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಲಂ–27 ರಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ. 97ನೇ ಸಂವಿಧಾನ ತಿದ್ದುಪಡಿಯ ಆಶಯದಂತೆ 2013ರ ಕಾಯ್ದೆ ತಿದ್ದುಪಡಿಗಳಲ್ಲಿ ಈ ಕಲಂನ್ನು ಸಶಕ್ತವಾಗಿ ಮಾಡಲಾಗಿದೆ ಎಂದರೆ ತಪ್ಪಾಗಲಾರದು. ಇದರೊಡನೆ ವಾರ್ಷಿಕ ಮಹಾಸಭೆ ನಡೆಸುವ ವಿಧಿವಿಧಾನಗಳ ಬಗ್ಗೆ ಕ.ರಾ.ಸ.ಸಂ. ನಿಯಮ 14ಎಜೆ ಯಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ.

ಇವುಗಳಲ್ಲಿ ಕೆಲವೊಂದು ಪ್ರಮುಖ ಅಂಶಗಳ ಬಗ್ಗೆ ಸಹಕಾರಿಗಳಾದ ನಾವು ಗ್ರಹಿಸಬೇಕಾದದ್ದು ಅತಿ ಅವಶ್ಯ.

1. ಸಭೆಯ ತಿಳುವಳಿಕೆ ಪತ್ರವನ್ನು ಎಲ್ಲ ಸದಸ್ಯರಿಗೆ ಹದಿನೈದು ದಿನಗಳ ಮೊದಲಿಗೆ ರವಾನಿಸುವುದು.
2. ತಿಳುವಳಿಕೆ ಪತ್ರದಲ್ಲಿ ಕಲಂ 27ರಲ್ಲಿ ನಿಹಿತ ರೀತಿ ಕಾರ್ಯಕ್ರಮಪಟ್ಟಿ ಇರತಕ್ಕದ್ದು.
3. ಸಭೆಯ ಕೋರಂ (ಕನಿಷ್ಠ ಅವಶ್ಯ ಹಾಜರಾತಿ ಸಂಖ್ಯೆ) ಮತದಾನ ಹಕ್ಕುಳ್ಳ ಸದಸ್ಯರ ಶೇ. 10 ಅಥವಾ 1000 ಯಾವುದು ಕಡಿಮೆಯೋ ಅದು.
4. ಸಭೆಗೆ ನಿಗದಿಪಡಿಸಿದ ಸಮಯದ ಒಂದು ಗಂಟೆ ಒಳಗೆ ಕೋರಂ ಆಗದಿದ್ದಲ್ಲಿ ಸಭೆಯನ್ನು ಸಭೆಯ ಅಧ್ಯಕ್ಷರು ಮುಂದೂಡಬೇಕಾಗುತ್ತದೆ.
5. ಸಭೆಯ ಆರಂಭದಿಂದ ಕೊನೆಯವರೆಗೂ ಕೋರಂನಷ್ಟು ಹಾಜರಾತಿ ಇರಬೇಕಾಗುತ್ತದೆ.
6. ಸಭೆ ಅಧ್ಯಕ್ಷರು ಮುಂದೂಡಿದ ಸಭೆಯ ದಿನಾಂಕ, ಸಮಯ ಗೊತ್ತುಪಡಿಸಬೇಕು. ಅದೇ ವಿಷಯಗಳನ್ನು ಕೈಗೊಳ್ಳಬೇಕು ಮತ್ತು ಈ ಸಭೆಗೂ ಕೋರಂ ಅವಶ್ಯ.

ಇದರಿಂದ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರ ಭಾಗವಹಿಸುವಿಕೆಗೆ ನೀಡಿರುವ ಪ್ರಾಮುಖ್ಯತೆಯನ್ನು ಅರಿಯಬಹುದಾಗಿದೆ. ಸದಸ್ಯರು ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿಕೊಳ್ಳಲು ಕಲಂ 27–ಎ ಅನ್ನು ನೂತನವಾಗಿ ಸೇರ್ಪಡಿಸಲಾಯಿತು ಮತ್ತು ಕಲಂ 20ರಲ್ಲಿ ತಿದ್ದುಪಡಿಗಳನ್ನು ತರಲಾಯಿತು. ಕಲಂ 27ಎ ರೀತಿ ಪ್ರತಿ ಸದಸ್ಯರು ಸಂಘದ ವ್ಯವಸ್ಥಾಪನೆಯಲ್ಲಿ ಭಾಗವಹಿಸಬೇಕು. ಅದೆಂದರೆ, ಕಳೆದ ಐದು ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಠ ಮೂರು ಸಭೆಗಳಿಗೆ ಹಾಜರಾಗಬೇಕು. ಉಪನಿಯಮಗಳಲ್ಲಿ ತಿಳಿಸಿದಂತೆ ಪ್ರತಿವರ್ಷ ಕನಿಷ್ಠ ಸೇವೆ ಸೌಲಭ್ಯಗಳನ್ನು ಬಳಸಿಕೊಂಡಿರಬೇಕು. ಇಲ್ಲದಿದ್ದಲ್ಲಿ ಮುಂದಿನ ಮೂರು ವರ್ಷಗಳು ಮತದಾನದ ಹಕ್ಕು ಕಳೆದುಕೊಳ್ಳುತ್ತಾರೆ. ಕಲಂ 20(a-iv)ರ ರೀತಿ ಐದು ಸಾಮಾನ್ಯ ಸಭೆಗಳಲ್ಲಿ ಮೂರು ಸಭೆಗಳಿಗೆ ಹಾಜರಾಗದಿದ್ದಲ್ಲಿ ಕಲಂ 20(a-v) ರೀತಿ. ಸತತ ಮೂರು ವರ್ಷಗಳಲ್ಲಿ ಉಪನಿಯಮದಲ್ಲಿ ತಿಳಿಸಿದಂತೆ ಕನಿಷ್ಠ ಸೇವೆ ಸೌಲಭ್ಯ ಉಪಯೋಗಿಕೊಳ್ಳದಿದ್ದಲ್ಲಿ ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾರೆ.

ಸದಸ್ಯರು ಕಾಯ್ದೆ ಕಾನೂನುಗಳ ಪಾಲನೆಗಾಗಿ ಭಾಗವಹಿಸುವುದಕ್ಕಿಂತ ಸಹಕಾರ ಸಂಘ ನಮ್ಮದು, ನಾನು ಸದಸ್ಯನಾಗಿರುತ್ತೇನೆ. ಸಹಕಾರ ಸಂಘ ಪ್ರಜಾಸತ್ತಾತ್ಮಕ ಸಂಸ್ಥೆ, ಇದು ಪ್ರಜಾಸತ್ತಾತ್ಮಕ ನಿಯಂತ್ರಣ ಹೊಂದಿದೆ. ಸಂಘ ನನಗೇನು ಮಾಡಿದೆ ಎನ್ನುವುದಕ್ಕಿಂತ ಸಂಘಕ್ಕೆ ನಾನೇನು ಮಾಡಿದ್ದೇನೆ. ನನ್ನ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಾನು ನಿರ್ವಹಿಸಿದ್ದೇನೆಯೇ ಎಂಬುದು ಸಹಕಾರ ಸಂಘದ ಯಶಸ್ಸು ಮತ್ತು ಸಹಕಾರ ಸಂಘದ ಚಳುವಳಿ ದೃಷ್ಟಿಯಿಂದ ಗಮನಿಸಬೇಕಾದ ಅಂಶ. ಆದುದ್ದರಿಂದ ಪ್ರಜ್ಞಾವಂತ ಸದಸ್ಯರಾದವರು ತಮ್ಮ ಬಾದ್ಯತೆಯನ್ನು ತೀರಿಸಿರುವುದಲ್ಲದೇ ಕರ್ತವ್ಯವನ್ನು ನಿರ್ವಹಿಸುವಾಗ ತಾನು ಸಶಕ್ತನಾಗುತ್ತಾನೆ(ಳೆ). ಆಗ ಮಹಾಸಭೆಯಲ್ಲಿ ಅಗತ್ಯತೆಯಿಂದ ವಿಷಯವಾರು ವಿಷಯಗಳನ್ನು ಗ್ರಹಿಸಿ, ವಾರ್ಷಿಕ ವರದಿಯನ್ನು

ಅಧ್ಯಯನ ಮಾಡಿ ಸಂಘದ ಪ್ರಗತಿಗೆ ಅವಶ್ಯ ಟಿಪ್ಪಣಿ ತಯಾರಿಸಿಕೊಂಡು ನ್ಯೂನ್ಯತೆಗಳು ಕಂಡು ಬಂದಿದ್ದರೆ, ಅಂತಿಮ ಆರ್ಥಿಕ ತಃಖ್ತೆಗಳಲ್ಲಿ ವ್ಯಾಪ್ತಿಯಗಳಿದ್ದಲ್ಲಿ ಪ್ರಶ್ನಿಸಿ ಆಡಳಿತ ಮಂಡಳಿಯ ಕಾರ್ಯಾಚರಣೆಯನ್ನು ಸರಿಯಾದ ಹಾದಿಗೆ ತರಲು ಇದು ಒಂದು ಸದಾವಕಾಶ.

ಆಡಳಿತ ಮಂಡಳಿಯು, ನಿರ್ದೇಶಕರು ಯಾವುದೇ ಸ್ವಹಿತಾಸಕ್ತಿ ಹೊಂದಿರುವುದಿಲ್ಲ. ಪಾರದರ್ಶಕತೆಯಿಂದ ಸದಸ್ಯರ ಹಿತಾಸಕ್ತಿಯಂತೆ ವರ್ತಿಸುತ್ತಿದ್ದಾರೆ ಎಂಬುದನ್ನು ಸದಸ್ಯರು ಅರಿಯುವಂತೆ ಮಾಡಲು ಕ.ರಾ.ಸ.ಸಂ. ಕಲಂ 27ರಂತೆ ವ್ಯಾಪ್ತಿಯಲ್ಲಿ ಮಂಡಿಸಬೇಕಾದ ವಿಷಯಗಳು.

1. ನಿರ್ದೇಶಕರ ಅಥವಾ ಮುಖ್ಯಕಾರ್ಯನಿರ್ವಾಹಕರ ನೆಂಟರಿಸ್ತರುಗಳು ನೇಮಕಾತಿಯಾಗಿದ್ದಲ್ಲಿ ಅವರ ಪಟ್ಟಿ.
2. ಸಂಘದ ಪದಾಧಿಕಾರಿಗಳಿಗೆ (ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳಿಗೆ, ಸಿಬ್ಬಂದಿ ವರ್ಗಗಳಿಗೆ ನಡತೆ ನೀತಿ ಸಂಹಿತೆ ರಚಿಸುವುದು.
3. ನಿರ್ದೇಶಕರು ಸಂಘ ಸೇವೆ ಸೌಲಭ್ಯ ಉಪಯೋಗಿಸಿ ಕೊಂಡಿರುವುದರ ಬಗ್ಗೆ ಟಿಪ್ಪಣಿ.
4. ನಿರ್ದೇಶಕರು ಮತ್ತು ಅವರ ನೆಂಟರಿಸ್ತರಿಗೆ ನೀಡಿರುವ ಸಾಲಗಳು, ಸುಸ್ತಿ, ವಸೂಲಿ ಕ್ರಮಗಳು
5. ನಿರ್ದೇಶಕರು, ಪದಾಧಿಕಾರಿಗಳು ಪಡೆದಿರುವ ಪ್ರವಾಸಭತ್ಯೆ, ದಿನಭತ್ಯೆ, ಸಂಭಾವನೆಗಳು ಇವುಗಳ ಪರಾಮರ್ಶೆ.

ಆಡಳಿತ ಮಂಡಳಿಯೂ ಕೂಡ ತನ್ನ ಜವಾಬ್ದಾರಿಯನ್ನು ಅರಿತು ನಿಷ್ಪಕ್ಷಪಾತದಿಂದ ತಮ್ಮ ಸ್ವಹಿತಾಸಕ್ತಿ, ದುರಾಸೆಗಳನ್ನು ಕೈಬಿಟ್ಟು ಸದಸ್ಯರ ಹಿತಾಸಕ್ತಿಗನುಸಾರ ಪರಿವರ್ತಿಸಿ, ಆಡಳಿತ ಮಂಡಳಿ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಂಘದ ಸರ್ವತೋಮುಖ ಏಳ್ಗೆಗೆ ಶ್ರಮಿಸಿದಾಗ ವಾರ್ಷಿಕ ಮಹಾಸಭೆಯು ಅರ್ಥಪೂರ್ಣವಾಗಿ ನಡೆದು, ಅದರ ಉದ್ದೇಶ ಸಾಧನೆಯಿಂದ ಪರಿಪೂರ್ಣತೆಯನ್ನು ಪಡೆದಂತಾಗುತ್ತದೆ.

**ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು**
**ಒರೆಯಾವಿನ ಬೆನ್ನ ಹರಿಯಲೇಕಯ್ಯ?**
**ಲಜ್ಜೆಗೆಡಲೇಕೆ? ನಾಣುಗೆಡಲೇಕೆ?**
**ಕೂಡಲಸಂಗಮದೇವನುಳ್ಳನ್ನಕ್ಕ**
**ಬಿಜ್ಜಳನ ಭಂಡಾರವೇನಗೇಕಯ್ಯಾ**

**– ಬಸವಣ್ಣ**

# ಮೂರು ಕೃಷಿ ಕಾಯ್ದೆ ವಾಪಸ್ : ಪ್ರಧಾನಿ ನರೇಂದ್ರ ಮೋದಿ ಘೋಷಣೆ

**ನವದೆಹಲಿ :** ಕೇಂದ್ರ ಸರ್ಕಾರ ಜ್ಯಾರಿಗೆ ತಂದಿದ್ದ ಮೂರು ಕೃಷಿ ಕಾನೂನುಗಳನ್ನು ಹಿಂಪಡೆಯುವುದಾಗಿ ಪ್ರಧಾನಿ ನರೇಂದ್ರ ಮೋದಿ ನವೆಂಬರ್ 19 ರಂದು ಘೋಷಿಸಿದ್ದಾರೆ. ಗುರುನಾನಕ್ ಜಯಂತಿ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ದೇಶವನ್ನುದ್ದೇಶಿಸಿ ಮಾತನಾಡಿದರು. ಉತ್ತರ ಪ್ರದೇಶ ಪ್ರವಾಸಕ್ಕೂ ಮುನ್ನ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ನೂತನವಾಗಿ ಜಾರಿಗೆ ತರಲಾಗಿರುವ ಮೂರು ಕೃಷಿ ಕಾನೂನುಗಳನ್ನು ಹಿಂಪಡೆಯುವುದಾಗಿ ಘೋಷಿಸಿದ್ದಾರೆ.

ಮೂರು ಕೃಷಿ ಕಾನೂನುಗಳನ್ನು ರದ್ದುಗೊಳಿಸಲು ಸರ್ಕಾರ ನಿರ್ಧರಿಸಿದೆ, ನಮ್ಮ ಸರ್ಕಾರವು ರೈತರ ಕಲ್ಯಾಣಕ್ಕಾಗಿ ಅದರಲ್ಲೂ ವಿಶೇಷವಾಗಿ ಸಣ್ಣ ರೈತರ ಕಲ್ಯಾಣಕ್ಕಾಗಿ, ದೇಶದ ಕೃಷಿ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ, ಹಳ್ಳಿಯ ಬಡವರ ಉಜ್ವಲ ಭವಿಷ್ಯಕ್ಕಾಗಿ, ಸಂಪೂರ್ಣ ಪ್ರಾಮಾಣಿಕತೆಯಿಂದ ಒಳ್ಳೆಯ ಉದ್ದೇಶದಿಂದ ಈ ಕಾನೂನನ್ನು ತಂದಿದ್ದೆವು ಎಂದು ಪ್ರಧಾನಿ ಮೋದಿ ಭಾಷಣದಲ್ಲಿ ಹೇಳಿದರು.

ಯೋಜನೆ ಬಗ್ಗೆ ರೈತರಿಗೆ ತಿಳಿಸುವಲ್ಲಿ ಸಾಕಷ್ಟು ಯತ್ನಿಸಿದ್ದೇವೆ. ಆದರೆ ಕೆಲವು ರೈತರು ಕಾಯ್ದೆಯನ್ನು ಅವರ ಸಲಹೆ ಒಪ್ಪಿಕೊಂಡಿದ್ದರೂ ವಿರೋಧಿಸುತ್ತಿದ್ದಾರೆ. ರೈತರ ನಿರಂತರ ಹೋರಾಟದ ಹಿನ್ನೆಲೆಯಲ್ಲಿ ಇದೀಗ ಸರ್ಕಾರ ಮೂರು ಕೃಷಿ ಕಾಯ್ದೆ ವಾಪಸ್ ಪಡೆಯಲು ನಿರ್ಧರಿಸಲಾಗಿದೆ ಎಂದು ಪ್ರಧಾನಿ ತಿಳಿಸಿದ್ದಾರೆ. ರೈತರ ಸಮಸ್ಯೆ ಬಗೆಹರಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ದೇಶದಲ್ಲಿ 100ರಲ್ಲಿ 80 ಪ್ರತಿಶತ ರೈತರು ಸಣ್ಣ ಹಿಡುವಳಿ ರೈತರಾಗಿದ್ದು, 10 ಕೋಟಿಗಿಂತ ಹೆಚ್ಚು ಸಣ್ಣ ರೈತರಿದ್ದಾರೆ. ಅವರ ಸಮಸ್ಯೆಗಳನ್ನು ನಾನು ಅರಿತಿದ್ದೇನೆ. ಅದನ್ನು ಬಗೆಹರಿಸಲು ಪ್ರಯತ್ನ ಮಾಡಲಾಗುತ್ತಿದ್ದು, ಬೀಜ, ವಿಮೆ, ಮಾರುಕಟ್ಟೆ, ಉಳಿತಾಯಕ್ಕೆ



ಯೋಜನೆಗಳಿಗಾಗಿ ರೈತರಿಗೆ ಫಸಲ್ ಬಿಮಾ, ಪೆನ್ಷನ್ ಯೋಜನೆ ಜಾರಿಗೆ ತಂದಿದ್ದೇವೆ ಎಂದು ತಿಳಿಸಿದ್ದಾರೆ.

## ಕೃಷಿ ಕಾಯ್ದೆ ರದ್ಧತಿಗೆ ಸಂಪುಟ ಅಸ್ತು

3 ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವುದಕ್ಕಾಗಿ ರೂಪಿಸಲಾಗಿರುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಮೂಲಗಳು ಸುದ್ದಿ ಸಂಸ್ಥೆಗಳಿಗೆ ತಿಳಿಸಿವೆ.

**3 ಕೃಷಿ ಕಾಯ್ದೆಗಳು :** 1) ರೈತರ ಉತ್ಪಾದನೆ, ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಸೌಲಭ್ಯ) ಮಸೂದೆ–2020 2) ರೈತರ (ಸಬಲೀಕರಣ ಮತ್ತು ಸಂರಕ್ಷಣೆ) ಬೆಲೆ ಖಾತ್ರಿ ಮತ್ತು ಕೃಷಿ ಸೇವೆಗಳ ಒಪ್ಪಂದ ಮಸೂದೆ–2020 ಮತ್ತು 3) ಅಗತ್ಯ ಸರಕುಗಳ (ತಿದ್ದುಪಡಿ) ಮಸೂದೆ–2020.



# ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ

▸▸ **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು, ಬೆಂಗಳೂರು.

**ಅಖಿಲ ಭಾರತ ಮಟ್ಟದ ತರಬೇತಿ ಸಂಸ್ಥೆಗಳ ಸಂಯೋಜನೆ/ಪುನರ್ ನಾಮಕರಣದ ಪರಿಣಾಮವಾಗಿ 1961ರಲ್ಲಿ ಭಾರತದ ರಾಷ್ಟ್ರೀಯ ಸಹಕಾರ ಯೂನಿಯನ್ (National Co operative Union of India NCUI)ನ್ನು ಸ್ಥಾಪಿಸಲಾಯಿತು. 1960ರ ಎಸ್.ಡಿ.ಮಿಶ್ರಾ ಸಮಿತಿಯ ಶಿಫಾರಸ್ಸಿನಂತೆ ಎನ್.ಸಿ.ಯೂ.ಐ ಅಧೀನದಲ್ಲಿ ಸಹಕಾರ ತರಬೇತಿ ಸಮಿತಿ (Council for Co-operative Training-CCT)ನ್ನು 1962ರಲ್ಲಿ ಸ್ಥಾಪಿಸಲಾಯಿತು. ಆರ್‌ಬಿಐ ನಡೆಸುತ್ತಿದ್ದ ವಿವಿಧ ಹಂತದ ಸಂಸ್ಥೆಗಳನ್ನು ಎನ್.ಸಿ.ಯೂ.ಐ\ರಾಜ್ಯ ಸಹಕಾರ ಒಕ್ಕೂಟಗಳಿಗೆ ವಹಿಸಿಕೊಟ್ಟಿತು. 1976ರಲ್ಲಿ ಸಹಕಾರ ತರಬೇತಿ ಸಮಿತಿಯನ್ನು ರಾಷ್ಟ್ರೀಯ ಸಹಕಾರ ತರಬೇತಿ ಸಮಿತಿ (National Council for Co operative Training-NCCT) ಎಂಬುದಾಗಿ ಹೆಸರಿಸಲಾಗಿದೆ.**

ರಾಕ್‌ಡೇಲ್ ಅಗ್ರಗಾಮಿಗಳು ಆಧುನಿಕ ಸಹಕಾರ ಚಳುವಳಿಯ ಸಂಸ್ಥಾಪಕರೆಂದು ಪ್ರಪಂಚದಲ್ಲಿ ಖ್ಯಾತಿಗಳಿಸಿರುತ್ತಾರೆ. ಇವರು ಕಾರ್ಯಸಾಧ್ಯ, ಯಶ್ವಸಿ ಸಹಕಾರ ಸಂಘವನ್ನು ಸ್ಥಾಪಿಸಿ, ಜಗತ್ತಿಗೆ :ಸಹಕಾರ ಆರ್ಥಿಕ ಪದ್ಧತಿಯ" ಬೆಳಕನ್ನು ಚೆಲ್ಲಿದ ಪ್ರಥಮಿಗರಾಗಿರುತ್ತಾರೆ. ಇವರು ತಾವು ಸ್ಥಾಪಿಸಿದ ಗ್ರಾಹಕರ ಸಹಕಾರ ಸಂಘವನ್ನು ನಡೆಸಲು ಕೆಲವು ನಿಯಮಗಳನ್ನು ರಚಿಸಿಕೊಂಡಿದ್ದು, ಅವುಗಳ ಪೈಕಿ "ಲಾಭದ ಸ್ವಲ್ಪ ಭಾಗವನ್ನು ಸದಸ್ಯರ ಶಿಕ್ಷಣಕ್ಕೆ ಕಾಯ್ದಿರಿಸುವುದು" ಎಂಬುದು ಸಹ ಒಂದು ನಿಯಮವಾಗಿತ್ತು. ಇದರ ಉದ್ದೇಶ ಸಹಕಾರದ ಮಹತ್ವ ಸಂಘಟನೆಯ ಗುರಿ, ಸಂಘದಲ್ಲಿ ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿಗಳು, ಸದಸ್ಯರು ಬೆಳೆಸಿಕೊಳ್ಳಬೇಕಾದ ಸಾಮಾಜಿಕ ಮೌಲ್ಯಗಳು, ಸಂಘದ ವ್ಯಾಪಾರ ವ್ಯವಹಾರಗಳ ಅನುಕೂಲತೆಗಳು, ಇತ್ಯಾದಿ ಬಗ್ಗೆ ಸದಸ್ಯರಿಗೆ, ಚರ್ಚೆ, ಕಾರ್ಯಾಗಾರ, ಪ್ರವಚನ, ಇತ್ಯಾದಿಗಳ ಮೂಲಕ ಶಿಕ್ಷಣ ನೀಡಿ ಸಹಕಾರದ ಬಗ್ಗೆ ಅರಿವು ಮೂಡಿಸುವುದು ಹಾಗೂ ಪ್ರಚಾರ ಪಡಿಸುವುದಾಗಿತ್ತು. ಈ ಮೂಲಕ ರಾಕ್‌ಡೇಲ್ ಅಗ್ರಗಾಮಿಗಳು ಸಹಕಾರದ ಸಂಘದ ಯಶಸ್ಸಿಗೆ ಸಹಕಾರ ಶಿಕ್ಷಣ ಬಹಳ ಮಹತ್ವದ್ದು ಎಂಬ ಸಂದೇಶವನ್ನು ಜಗತ್ತಿಗೆ ಚಳುವಳಿಯ ಆರಂಭದಲ್ಲಿಯೇ ನೀಡಿದರು. ಇವು ರಚಿಸಿಕೊಂಡಿದ್ದ ಸಹಕಾರ ಶಿಕ್ಷಣದ ನಿಯಮವು ಇಂದಿಗೂ "ಸಹಕಾರ ತತ್ವಗಳ" ಪೈಕಿ ಒಂದು ತತ್ವವಾಗಿ ಘೋಷಿಸಲ್ಪಟ್ಟಿದೆ.

ಸಹಕಾರ ಶಿಕ್ಷಣದ ಧ್ಯೇಯದ ಬಗ್ಗೆ ಸರ್ ಆರ್ಥರ್ ಹೆಚ್.ಡಿ. ಆಕ್‌ಲ್ಯಾಂಡ್ ಮತ್ತು ಬಿ.ಜೋನ್ಸ್ ರವರು "ಸಹಕಾರ ಶಿಕ್ಷಣದ ಗುರಿಯು ಕೇವಲ ಗ್ರಾಹಕ ಆಗಿರುವಂತಹ ವ್ಯಕ್ತಿಯನ್ನು ಒಬ್ಬ ಸಹಕಾರಿ ಮತ್ತು ಉತ್ತಮ ಪ್ರಜೆ, ಸಮೂಹಕ್ಕೆ ಗರಿಷ್ಟಮಟ್ಟದ ಶಕ್ತಿಯವರೆಗೆ ಸೇವೆ ಮಾಡಲು ಸಮರ್ಥ ಮತ್ತು ಸಮ್ಮತಿ ಉಳ್ಳವನನ್ನಾಗಿ ಪರಿವರ್ತಿಸುವುದಾಗಿರುತ್ತದೆ" ಎಂಬುದಾಗಿ ಹೇಳಿರುತ್ತಾರೆ.

ನಮ್ಮ ದೇಶದಲ್ಲಿ 1904ರಲ್ಲಿ ಸಹಕಾರ ಪತ್ತಿನ ಸಂಘಗಳ ಕಾಯ್ದೆಯನ್ನು ಜಾರಿಗೆ ತರುವುದರ ಮೂಲಕ ಚಳುವಳಿಯನ್ನು ಆರಂಭಿಸಿದಾಗ ಸಹಕಾರ ಶಿಕ್ಷಣ ಮತ್ತು ತರಬೇತಿ ವ್ಯವಸ್ಥೆಯನ್ನು ರೂಪಿಸಲು ಕ್ರಮವಿಡಲಿಲ್ಲ. 1915ರ ಸರ್.ಇ.ಡಿ ಮ್ಯಾಕ್ಲಗನ್ ಸಮಿತಿಯ ವರದಿಯಲ್ಲಿ ಸಹಕಾರ ಶಿಕ್ಷಣವನ್ನು ಸದಸ್ಯರಿಗೆ, ಅಧಿಕಾರಿ ಸಿಬ್ಬಂದಿಗಳಿಗೆ ನೀಡಬೇಕೆಂದು ಪ್ರಪ್ರಥಮವಾಗಿ ತಿಳಿಸಿರುತ್ತದೆ. ಸಹಕಾರವು ಕಪಟವಾಗದೆ ನಿಜವಾದುದ್ದಾಗಬೇಕಾದರೆ ಶಿಕ್ಷಣ ಅಗತ್ಯ ಎಂದು ಹೇಳಿರುತ್ತಾರೆ. 1919–29ರ ಅವಧಿಯಲ್ಲಿ ಪ್ರಾಂತೀಯ ಸರ್ಕಾರಗಳು ಸಹಕಾರ ಒಕ್ಕೂಟಗಳನ್ನು ಸ್ಥಾಪಿಸಿ ಸಹಕಾರ ಶಿಕ್ಷಣದತ್ತ ಗಮನ ನೀಡಿದವು. 1929ರಲ್ಲಿ ಅಖಿಲ ಭಾರತ ಸಹಕಾರ ಸಂಸ್ಥೆಗಳ ಸಂಘವನ್ನು (All India Association of Co-operative Institutions) ಸ್ಥಾಪಿಸಲಾಗಿರುತ್ತದೆ. 1929ರ ಕೃಷಿ ಕುರಿತ ರಾಯಲ್ ಕಮೀಷನ್, ಸರ್.ಎಮ್.ಎಲ್ ಡಾರ್ಲಿಂಗ್ ವರದಿ ಮತ್ತು 1945ರ ಸಹಕಾರ ಯೋಜನಾ ಸಮಿತಿ, ಇವೆಲ್ಲವೂ ಸಹಕಾರ ಶಿಕ್ಷಣ ಮತ್ತು ತರಬೇತಿಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಿರುತ್ತವೆ. ಸಹಕಾರ ಸಂಘಗಳ ವಿಫಲತೆಗೆ ಸಹಕಾರ ಶಿಕ್ಷಣ ಮತ್ತು ತರಬೇತಿಯ ಕೊರತೆಯೇ ಮುಖ್ಯ ಕಾರಣವೆಂದು ಹೇಳಿರುತ್ತವೆ.

ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಸಹಕಾರ ಶಿಕ್ಷಣ ಮತ್ತು ತರಬೇತಿಯ ಅಭಿವೃದ್ಧಿಗೆ ಪ್ರಾಮುಖ್ಯತೆ ದೊರೆಯಿತು. 1947ಕ್ಕೂ ಮೊದಲು ಸಹಕಾರ ತರಬೇತಿ ನೀಡುವ ಜವಾಬ್ದಾರಿಯು ಪ್ರಾಂತೀಯ ಸರ್ಕಾರಗಳದಾಗಿತ್ತು. 1947ರ ನಂತರ ಕೇಂದ್ರ ಸರ್ಕಾರ ಮತ್ತು ಆರ್‌ಬಿಐ ಒಟ್ಟಾಗಿ ಹೆಚ್ಚೆ ಹಾಕಿದವು. 1953ರಲ್ಲಿ ಕೇಂದ್ರ ಸರ್ಕಾರ ಮತ್ತು ಆರಬಿಐ ಜಂಟಿಯಾಗಿ ಸೆಂಟ್ರಲ್ ಕಮಿಟಿ ಫಾರ್ ಕೋ–ಆಪರೇಟಿವ್ ಟ್ರೈನಿಂಗ್ ಅನ್ನು (Central Committee for Co operative Training-C C C T) ಸ್ಥಾಪಿಸಿದ್ದು ಮುಖ್ಯವಾದ ಆರಂಭವಾಗಿರುತ್ತದೆ. 1954ರಲ್ಲಿ ಹಿರಿಯ ಅಧಿಕಾರಿಗಳಿಗೆ ತರಬೇತಿ ನೀಡಲು ಪೂನಾ ತರಬೇತಿ ಸಂಸ್ಥೆಯನ್ನು ಮಧ್ಯಮ ವರ್ಗದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲು ಐದು ಪ್ರಾಂತೀಯ ತರಬೇತಿ ಸಂಸ್ಥೆಗಳನ್ನು ಹಾಗೂ 8 ಬ್ಲಾಕ್ ಲೆವೆಲ್ ತರಬೇತಿ ಸಂಸ್ಥೆಗಳನ್ನು 1956ರ ಒಳಗಾಗಿ ಸ್ಥಾಪಿಸಲಾಗಿರುತ್ತದೆ.

ಅಖಿಲ ಭಾರತ ಮಟ್ಟದ ತರಬೇತಿ ಸಂಸ್ಥೆಗಳ ಸಂಯೋಜನೆ/ಪುನರ್ ನಾಮಕರಣದ ಪರಿಣಾಮವಾಗಿ 1961ರಲ್ಲಿ ಭಾರತದ ರಾಷ್ಟ್ರೀಯ ಸಹಕಾರ ಯೂನಿಯನ್ (National Co operative Union of India NCUI)ನ್ನು ಸ್ಥಾಪಿಸಲಾಯಿತು. 1960ರ ಎಸ್.ಡಿ.ಮಿಶ್ರಾ ಸಮಿತಿಯ ಶಿಫಾರಸ್ಸಿನಂತೆ ಎನ್.ಸಿ.ಯೂ.ಐ ಅಧೀನದಲ್ಲಿ ಸಹಕಾರ ತರಬೇತಿ ಸಮಿತಿ (Council for Co-operative Training-CCT)ನ್ನು 1962ರಲ್ಲಿ ಸ್ಥಾಪಿಸಲಾಯಿತು. ಆರ್‌ಬಿಐ ನಡೆಸುತ್ತಿದ್ದ ವಿವಿಧ ಹಂತದ ಸಂಸ್ಥೆಗಳನ್ನು ಎನ್.ಸಿ.ಯೂ.ಐ\ರಾಜ್ಯ ಸಹಕಾರ ಒಕ್ಕೂಟಗಳಿಗೆ ವಹಿಸಿಕೊಟ್ಟಿತು. 1976ರಲ್ಲಿ ಸಹಕಾರ ತರಬೇತಿ ಸಮಿತಿಯನ್ನು ರಾಷ್ಟ್ರೀಯ ಸಹಕಾರ ತರಬೇತಿ ಸಮಿತಿ (National Council for

Co operative Training-NCCT) ಎಂಬುದಾಗಿ ಹೆಸರಿಸಲಾಗಿದೆ.

ಪ್ರಸ್ತುತ ದೇಶದಲ್ಲಿ ಸಹಕಾರ ಶಿಕ್ಷಣ ಮತ್ತು ತರಬೇತಿಯ ರಚನೆಯು ಮೂರು ಹಂತದ ವ್ಯವಸ್ಥೆಯಿಂದ ಕೂಡಿರುತ್ತದೆ. ರಾಷ್ಟಮಟ್ಟದಲ್ಲಿ ಭಾರತದ ರಾಷ್ಟ್ರೀಯ ಸಹಕಾರ ಯೂನಿಯನ್ (NCUI) ರಾಜ್ಯಮಟ್ಟದಲ್ಲಿ ರಾಜ್ಯ ಸಹಕಾರ ಮಹಾಮಂಡಳಗಳು ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಹಕಾರ ಯೂನಿಯನ್ ಗಳು ಇರುತ್ತವೆ. ಸಂಸ್ಥೆಗಳು ಮೂರು ಹಂತದಿಂದ ಕೂಡಿರುವಂತೆಯೇ ತರಬೇತಿಯು ಮೂರು ಹಂತದಿಂದ ಕೂಡಿರುತ್ತದೆ. ಹಿರಿಯ ಅಧಿಕಾರಿಗಳಿಗೆ ತರಬೇತಿ ನೀಡುವುದಕ್ಕಾಗಿ ಪೂನಾದಲ್ಲಿ ವೈಕುಂಠ ಮೆಹ್ತಾ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ (Vaikunth Mehta national Institute of Co operative Management–VAMNICOM) ಮಧ್ಯಮ ವರ್ಗದ ನೌಕರರಿಗೆ ತರಬೇತಿ ನೀಡುವುದಕ್ಕಾಗಿ 5 ಪ್ರಾದೇಶಿಕ ಸಹಕಾರ ಆಡಳಿತ ತರಬೇತಿ ಸಂಸ್ಥೆಗಳು (Regional Institute of Co operative Management–R.I.C.M) ಮತ್ತು 14 ಸಹಕಾರ ತರಬೇತಿ ಸಂಸ್ಥೆಗಳು (Institute of of Co operative Management-I.C.M) ಹಾಗೂ ಕಿರಿಯ ದರ್ಜೆಯ ಸಿಬ್ಬಂದಿ ತರಬೇತಿಗಾಗಿ 108 ಕಿರಿಯ ಸಹಕಾರ ತರಬೇತಿ ಕೇಂದ್ರಗಳು (Junior Co-operative Training Centres) ಇರುತ್ತವೆ. ಈ ಕಿರಿಯ ದರ್ಜೆಯ ಸಹಕಾರ ತರಬೇತಿ ಕೇಂದ್ರಗಳು ರಾಜ್ಯ ಮಹಾಮಂಡಳದ ಅಧೀನದಲ್ಲಿರುತ್ತವೆ. ಪ್ರಸ್ತುತ ಕರ್ನಾಟಕದಲ್ಲಿ 08 ಕಿರಿಯ ಸಹಕಾರ ತರಬೇತಿ ಕೇಂದ್ರಗಳಿದ್ದು ಇವುಗಳನ್ನು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ (Karnataka Institute of Co operative Management-K.I.C.M) ಎಂದು ಕರೆಯಲಾಗುತ್ತದೆ.

# ರಾಜ್ಯದ ಸಹಕಾರ ಚಳುವಳಿಯಲ್ಲಿ ಕ್ರಿಯಾಶೀಲ ಸಹಕಾರಿ - ವಿ.ರಾಜು



ಕರ್ನಾಟಕ ರಾಜ್ಯದ ಸಹಕಾರ ಚಳುವಳಿ ಉತ್ತುಂಗದಲ್ಲಿದೆ. ಸಹಕಾರಿಗಳು ಬದ್ಧತೆ, ದಕ್ಷತೆ, ಸೇವಾ ಮನೋಭಾವನೆಯಿಂದ ಚಳುವಳಿಯಲ್ಲಿ ತೊಡಗಿಸಿಕೊಂಡು ಬಲವರ್ಧನೆಗೊಳಿಸುತ್ತಿದ್ದಾರೆ. ಇಂಥವರ ಸಾಲಿನಲ್ಲಿ ಶಿವಮೊಗ್ಗನಗರದ ವಿ.ರಾಜು ಅವರೂ ಒಬ್ಬರು.

ಶ್ರೀಯುತರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ದಿ||ಎಂ.ವೆಂಕಟರಾಮ್ ಮತ್ತು ದಿ||ಲಕ್ಷ್ಮಮ್ಮ ಅವರ ಸುಪುತ್ರರು. ವೃತ್ತಿಯಲ್ಲಿ ಭಾರತೀಯ ಜೀವ ವಿಮಾ ನಿಗಮ ಪ್ರತಿನಿಧಿಯಾಗಿ, ಖಾಸಗಿ ಉದ್ಯಮಿಯ ಜೊತೆಗೆ ಸಹಕಾರ ಕ್ಷೇತ್ರದ ತತ್ವವಾದ "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಎಂಬಂತೆ ಜನರಲ್ಲಿ ಸಮಾನತೆ ತರಲು ಪ್ರಯತ್ನಿಸುತ್ತಾ ಬಂದಿದ್ದಾರೆ.

1985ರ ವರ್ಷದಲ್ಲಿ ಸಹಕಾರ ಕ್ಷೇತ್ರ ಪ್ರವೇಶಿಸಿದ ವಿ.ರಾಜು ಅವರು ಶಿವಮೊಗ್ಗದ ದುರ್ಗಿಗುಡಿ ಕೋ-ಆಪರೇಟಿವ್ ಸೊಸೈಟಿಯ ನಿರ್ದೇಶಕರಾಗಿ ಆಯ್ಕೆಯಾಗಿರುತ್ತಾರೆ. 1997-98ರಲ್ಲಿ ಹಾಗೂ 2006-07ರ ಅವಧಿಯಲ್ಲಿ ಸಂಘದ ಅಧ್ಯಕ್ಷರಾಗಿ ಮಾರ್ಗದರ್ಶನ ಮಾಡಿದ್ದಾರೆ. ಇವರ ಸೇವಾ ಅವಧಿಯಲ್ಲಿ ಸಂಘವು ದಿ.ಎಸ್ ರಾಮಯ್ಯ ವಾಣಿಜ್ಯ ಕಟ್ಟಡ ನಿರ್ಮಾಣಗೊಂಡು ಅಂದಿನ ಮುಖ್ಯಮಂತ್ರಿ ಜೆ.ಹೆಚ್.ಪಟೇಲರಿಂದ ಉದ್ಘಾಟನೆಗೊಂಡಿರುತ್ತದೆ. ಅಲ್ಲದೇ ಸಂಘವು 1991-92 ರಲ್ಲಿ ಸುವರ್ಣ ಮಹೋತ್ಸವ ಆಚರಿಸಿಕೊಂಡಿದ್ದು ಎಸ್.ಎಂ.ಕೃಷ್ಣ ಅವರಿಂದ ನೆರವೇರಲ್ಪಟ್ಟಿರುವುದು ಇವರ ಸಾಧನೆಗಳಿಗೆ ಹಿಡಿದ ಕೈಗನ್ನಡಿಯಾಗಿದೆ. ಶ್ರೀ ಕಂಚಿ ಕಾಮಾಕ್ಷಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷರಾಗಿ, ಹಾಲಿ ನಿರ್ದೇಶಕರಾಗಿಯೂ ಸೇವೆ ಸಲ್ಲಿಸುತ್ತಿರುವ ಶ್ರೀಯುತರು ಸಹಕಾರ ರಂಗದ ಸೇವೆಗಾಗಿ ಸಹಕಾರ ಸಪ್ತಾಹ-2012ರ ಸಂದರ್ಭದಲ್ಲಿ ಶ್ರೇಷ್ಠ ಸಹಕಾರಿ ಪ್ರಶಸ್ತಿಗೆ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಬಾಜನರಾಗಿದ್ದಾರೆ. ಶಿವಮೊಗ್ಗದಲ್ಲಿ "ಸಹಕಾರ ಭವನ" ನಿರ್ಮಾಣ ಕಾರ್ಯಕ್ಕೂ ನೆರವಾಗಿರುವ ವಿ.ರಾಜು ಅವರು 2011-12ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಜಿಲ್ಲಾ ಸಚಿವರಿಂದ ನಿವೇಶನ ಮಂಜೂರು ಮಾಡಿಸುವಲ್ಲಿ ಯಶಸ್ವಿಯಾಗಿದ್ದು ಸದರಿ ನಿವೇಶನದಲ್ಲಿ ಸುಸಜ್ಜಿತ ಕಟ್ಟಡ ನಿರ್ಮಾಣಗೊಂಡಿದೆ. ವಿ.ರಾಜು ಅವರು ರಾಜ್ಯಮಟ್ಟದ ಸಹಕಾರ ಸಂಸ್ಥೆಗಳ ಬೆಳವಣಿಗೆಗೂ ಕಾರಣಕರ್ತರಾಗಿದ್ದು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸ್ಥಾಪಕ ನಿರ್ದೇಶಕರಾಗಿ, ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿ ನಿರಂತರವಾಗಿ ನಿರ್ದೇಶಕರಾಗಿ ಪತ್ತಿನ ಸಹಕಾರ ಚಳುವಳಿಗೆ ವಿಶೇಷ ಮಾರ್ಗದರ್ಶನ ಮಾಡುತ್ತಿದ್ದಾರೆ.

ಪತ್ರಿಕೋದ್ಯಮದ ಮೂಲಕ "ವಾಸ್ತವವಾಣಿ ಮತ್ತು "ಸಾಧುಶೆಟ್ಟಿ ವಾರ್ತೆ" ಪತ್ರಿಕೆಗಳು ಇವರ ಸಂಪಾದಕತ್ವದಲ್ಲಿ ಮೂಡಿಬರುತ್ತಿದ್ದು, ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿರುವ ವಿ.ರಾಜು ಅವರು ಧಾರ್ಮಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ತೊಡಗಿಸಿಕೊಂಡು ಎಲೆಮರೆಯ ಕಾಯಿಯಂತೆ ಸೇವೆ ಸಲ್ಲಿಸುತ್ತಿದ್ದಾರೆ. ವಿ.ರಾಜುರವರು ವಿದ್ಯಾಕ್ಷೇತ್ರದಲ್ಲಿ ಶರಾವತಿ ಎಜುಕೇಷನ್ ಸ್ಥಾಪಕ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿರುವ ಜೊತೆಜೊತೆಗೆ ಇಂಟರ್ ನ್ಯಾಷನಲ್ ಲಯನ್ಸ್ ಕ್ಲಬ್, ಕಾಸ್ಮೊಪಾಲಿಟನ್ ಕ್ಲಬ್‌ನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿಯೂ ಮಾರ್ಗದರ್ಶನ ಮಾಡಿದ್ದಾರೆ.

ಶ್ರೀಯುತರು ವಿಶೇಷವಾಗಿ ಸಹಕಾರ ಕ್ಷೇತ್ರದ ಮೂಲಕ ಆರ್ಥಿಕವಾಗಿ ಅಬಲರಾದ ಜನರ ಏಳಿಗೆಗೆ ಶ್ರಮಿಸುತ್ತಿದ್ದು, ಹಲವು ಗೌರವಗಳಿಗೆ ಪಾತ್ರರಾಗಿದ್ದಾರೆ. ಮುಂಬರುವ ದಿನಗಳಲ್ಲಿ ಇವರ ಸೇವೆ ಯುವಜನರಿಗೆ ಮಾದರಿಯಾಗಲೆಂದು ಆಶೀಸೋಣ.